ಮೋದಿ ಅವರ ಜೆಡ್ಡಾ ಭೇಟಿ ಸಂದರ್ಭ ಭಾರತ-ಸೌದಿ ಅರೇಬಿಯ 6 ಒಡಂಬಡಿಕೆ ಪತ್ರಗಳಿಗೆ ಸಹಿ ಹಾಕಲಿವೆ. ಪ್ರಧಾನಿ ಮೋದಿ ಮಂಗಳವಾರ ಸಂಜೆ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಅಲ್ ಸೌದ್ ಭೇಟಿ ವೇಳೆ, ಭಾರತದ ಹಜ್ ಯಾತ್ರಿಕರ ಕೋಟಾ ವಿಚಾರವನ್ನೂ ಚರ್ಚಿಸಲಿದ್ದಾರೆ ಎಂದು ತಿಳಿದುಬಂದಿದೆ.

ನಾನು ಭಾರತದಲ್ಲೇ ಇರುವೆ: ವ್ಯಾನ್ಸ್ ಪುತ್ರ ಇವಾನ್

ದೆಹಲಿ: 'ಅಪ್ಪಾ, ನನಗೆ ಭಾರತ ಬಹಳ ಇಷ್ಟವಾಗಿದೆ. ನಾನು ಭಾರತದಲ್ಲೇ ಇರಲು ಇಚ್ಛಿಸುವೆ'...

ಇದು ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ -ಭಾರತ ಮೂಲದ ಉಷಾ ವ್ಯಾನ್ಸ್ ದಂಪತಿಯ ಪುತ್ರ, 7 ವರ್ಷದ ಇವಾನ್ ಆಸೆಯಾಗಿದೆ.

ಜೆ.ಡಿ.ವ್ಯಾನ್ಸ್ ದಂಪತಿ ತಮ್ಮ ಮೂವರು ಮಕ್ಕಳೊಂದಿಗೆ ಭಾರತ ಪ್ರವಾಸದಲ್ಲಿದ್ದಾರೆ. ಸೋಮವಾರ ರಾತ್ರಿ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಉಪಾಧ್ಯಕ್ಷರ ಕುಟುಂಬಕ್ಕೆ ಏರ್ಪಡಿಸಿದ್ದ ವಿಶೇಷ ಔತಣಕೂಟ ಮೂರೂ ಮಕ್ಕಳಿಗೆ ಮೆಚ್ಚುಗೆಯಾಗಿದೆ. ಅದರಲ್ಲೂ 7 ವರ್ಷದ ಇವಾನ್‌ಗಂತೂ ಊಟದಲ್ಲಿನ ರುಚಿಕರ ತಿನಿಸುಗಳು ಬಹಳ ಇಷ್ಟವಾಗಿವೆ. ಅಲ್ಲದೇ, ಪ್ರಧಾನಿ ಮೋದಿ ಅವರ ಒಡನಾಟ, ತಮಾಷೆಯ ಮಾತು, ಅವರು ಕೊಟ್ಟ ನವಿಲುಗರಿ ಉಡುಗೊರೆ ಎಲ್ಲವೂ ಅವನ ಮನಗೆದ್ದಿವೆ. ಹಾಗಾಗಿ ಇವಾನ್, ಭಾರತದಲ್ಲೇ ಇರಲು ಇಷ್ಟಪಡುತ್ತಿದ್ದಾನೆ. ಅದೇ ಮಾತನ್ನು ತಂದೆ ವ್ಯಾನ್ಸ್ ಬಳಿಯೂ ಹೇಳಿದ್ದಾನೆ. 'ಅಪ್ಪ ನಾನು ಭಾರತದಲ್ಲೇ ಉಳಿಯಲು ಇಷ್ಟಪಡುವೆ' ಎಂದಿದ್ದಾನೆ. ಈ ಮಾತನ್ನು ಸ್ವತಃ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರೇ ಜೈಪುರದಲ್ಲಿ ಮಂಗಳವಾರದ ಕಾರ್ಯಕ್ರಮದಲ್ಲಿ ಬಹಿರಂಗಪಡಿಸಿದ್ದಾರೆ.

ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರ ಇಬ್ಬರು ಪುತ್ರರು, ಒಬ್ಬ ಪುತ್ರಿ ಪೋಷಕರೊಂದಿಗೆ ತಮ್ಮ ಭೇಟಿಗೆ ಸೋಮವಾರ ಸಂಜೆ ಆಗಮಿಸಿದ್ದಾಗ ಪ್ರಧಾನಿ ನರೇಂದ್ರ ಮೋದಿ ನವಿಲುಗರಿ ನೀಡಿದರು.

ಟ್ರಂಪ್ ಆಡಳಿತ ವಿರುದ್ಧ ಹಾರ್ವರ್ಡ್ ವಿವಿ ದಾವೆ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯದ ನಡುವಿನ 'ಅನುದಾನ ಸ್ಥಗಿತ' ಮತ್ತು 'ಎಡಪಂಥೀಯ ಧೋರಣೆ' ಜಟಾಪಟಿ ದಿನದಿಂದ ದಿನಕ್ಕೆ ಜೋರಾಗುತ್ತಿದೆ.

1867
HOWARD
UNIVERSITY

ಹಾರ್ವರ್ಡ್ ವಿವಿ ಎಡಪಂಥೀಯ ದೋರಣೆ ಅನುಸರಿಸುತ್ತಿರುವುದು ಸರಿಯಲ್ಲ, ಅದು ದೇಶದ ಭದ್ರತೆಗೆ ಸವಾಲಾಗಿದೆ ಎಂದಿರುವ ಟ್ರಂಪ್ ಆಡಳಿತ, ಅಮೆರಿಕ ಸರಕಾರ ವಿಶ್ವವಿದ್ಯಾಲಯಕ್ಕೆ ನೀಡುತ್ತಿದ್ದ 220 ಕೋಟಿ ಡಾಲರ್ ಅನುದಾನವನ್ನು ಸ್ಥಗಿತಗೊಳಿಸುವುದಾಗಿ ಟ್ರಂಪ್ ಆಡಳಿತ ಎಚ್ಚರಿಸಿದೆ. ಇದರ ವಿರುದ್ಧ ಹಾರ್ವರ್ಡ್ ವಿವಿ ಆಡಳಿತ ಕೋರ್ಟ್ ಮೆಟ್ಟಿಲೇರಿದೆ. ಟ್ರಂಪ್ ಆಡಳಿತ ಹಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನಿಲ್ಲಿಸಿದೆ. ಈಗ ಹಾರ್ವರ್ಡ್ ವಿವಿ ಮತ್ತು ಸರಕಾರದ ನಡುವೆ ಜಟಾಪಟಿ ನಡೆದಿದೆ. ಹಾರ್ವರ್ಡ್ ವಿಶ್ವವಿದ್ಯಾಲಯದ ಆರೋಗ್ಯ ಸಂಶೋಧನೆ ಗುರಿಯಾಗಿಸಿ ಅನುದಾನ ತಡೆಹಿಡಿದಿದೆ ಎಂದು ಮಾಧಮಗಳು ವರದಿ ಮಾಡಿವೆ. ವಾಸ್ತವವಾಗಿ, ಟ್ರಂಪ್ ಸರಕಾರ ಈಗಾಗಲೇ 220 ಕೋಟಿ ಡಾಲರ್ ಅನುದಾನ ಸ್ಥಗಿತಗೊಳಿಸಿದೆ. ಅದಲ್ಲದೇ 2ನೇ ಹಂತದಲ್ಲಿ 100 ಕೋಟಿ ಡಾಲರ್ ಅನುದಾನ ಕಡಿತಗೊಳಿಸುವುದಾಗಿ ವಿವಿಗೆ ಎಚ್ಚರಿಕೆ ನೀಡಿದೆ.

ತೆಲುಗು ನಟ ಮಹೇಶ್ ಬಾಬುಗೆ ಇ.ಡಿ ನೋಟಿಸ್

ಹೈದರಾಬಾದ್: ತೆಲುಗು ಚಿತ್ರರಂಗದ ಜನಪ್ರಿಯ ನಟ ಮಹೇಶ್ ಬಾಬು ಅವರಿಗೆ ಜಾರಿ ನಿರ್ದೇಶನಾಲಯ(ಇ.ಡಿ.) ನೋಟಿಸ್ ನೀಡಿದೆ. ಹೈದರಾಬಾದ್‌ನ ಸುರಾನ ಗ್ರೂಪ್ ಮತ್ತು ಸಾಯಿಸೂರ್ಯ

ಡೆವಲಪರ್ಸ್‌ಗಳಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ಸಾಕ್ಷಿದಾರರಾಗಿ ಹೇಳಿಕೆ ನೀಡಲು ಏ.28ರ ಬೆಳಗ್ಗೆ 10.30ಕ್ಕೆ ಇ.ಡಿ. ಕಚೇರಿಗೆ ಹಾಜರಾಗುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಈ ರಿಯಲ್ ಎಸ್ಟೇಟ್ ಕ್ಷೇತ್ರದ ಕಂಪನಿಗಳ ಯೋಜನೆಗಳ ಪ್ರಚಾರದಲ್ಲಿ ಮಹೇಶ್ ಬಾಬು ಭಾಗಿಯಾಗಿದ್ದು, ಜಾಹಿರಾತು ಒಪ್ಪಂದಕ್ಕಾಗಿ ಒಟ್ಟು 5.90 ಕೋಟಿ ರು.ಗಳನ್ನು ಪಡೆದಿದ್ದರು. ಇದರಲ್ಲಿ ಚೆಕ್ ಮೂಲಕ 3.40 ಕೋಟಿ ರು. ಮತ್ತು ನಗದು ರೀತಿಯಲ್ಲಿ 2.50 ಕೋಟಿ ರು.ಗಳನ್ನು ಪಡೆದಿದ್ದಾರೆ. ಈಗ, ನಗದು ಪಾವತಿ ಇ.ಡಿ ಪರಿಶೀಲನೆಗೆ ಒಳಪಟ್ಟಿದೆ.

ಸುರಾನ ಗ್ರೂಪ್ ಮತ್ತು ಸಾಯಿಸೂರ್ಯ ಡೆವಲಪರ್ಸ್ ಸಂಸ್ಥೆಗಳ ವಿರುದ್ಧ ವಂಚನೆ ಆರೋಪವೂ ಕೇಳಿಬಂದಿದ್ದು, ತೆಲಂಗಾಣ ಪೊಲೀಸರು ಭಾಗ್ಯನಗರ ಪ್ರಾಪರ್ಟೀಸ್ ಲಿ.ನ ನರೇಂದ್ರ ಸುರಾನ ಮತ್ತು ಸಾಯಿ ಸೂರ್ಯ ಡೆವಲಪರ್ಸ್‌ನ ಸತೀಶ್ ಚಂದ್ರ ಗುಪ್ತಾ ವಿರುದ್ಧ ಹಲವು ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಇಬ್ಬರೂ ಅನಧಿಕೃತ ಲೇಔಟ್‌ಗಳಲ್ಲಿ ಪ್ಲಾಟ್‌ಗಳ ಮಾರಾಟ ನೆಪದಲ್ಲಿ ಜನರಿಗೆ ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಕೋಟ: ಮತ್ತೊಬ್ಬ ನೀಟ್ ಆಕಾಂಕ್ಷಿ ಆತ್ಮಹತ್ಯೆ

ಕೋಟಾ: ರಾಜಸ್ಥಾನ ರಾಜ್ಯದ ಕೋಟ ನಗರದಲ್ಲಿ ಬಿಹಾರದ 18 ವರ್ಷದ ನೀಟ್ ಆಕಾಂಕ್ಷಿ ಮಂಗಳವಾರ ಮುಂಜಾನೆ ಹಾಸ್ಟೆಲ್ ಕೋಣೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೊಠಡಿಯಲ್ಲಿ ಡೆತ್‌ನೋಟ್ ಪತ್ತೆಯಾಗಿದೆ. ಅದರಲ್ಲಿ, ತನ್ನ ಸಾವಿಗೆ ಕುಟುಂಬವಾಗಲಿ ಅಥವಾ ನೀಟ್-ಯುಜಿ ಪರೀಕ್ಷೆಯಾಗಲೀ ಕಾರಣವಲ್ಲವೆಂದು ವಿದ್ಯಾರ್ಥಿ ಬರೆದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.



ಬಿಹಾರದ ಛಪ್ರಾ ಜಿಲ್ಲೆಯ ವಿದ್ಯಾರ್ಥಿ ಒಂದು ವರ್ಷದಿಂದ ಇಲ್ಲಿನ ಕೋಚಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ನೀಟ್-ಯುಜಿಗೆ ತಯಾರಿ ನಡೆಸುತ್ತಾ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದ. ಆತ್ಮಹತ್ಯೆಗೂ ಮುನ್ನ ವಿದ್ಯಾರ್ಥಿ ಸಹೋದರಿಗೆ ವಾಟ್ಸಾಪ್ ಸಂದೇಶ ಕಳುಹಿಸಿದ್ದಾನೆ. ತಕ್ಷಣ ಸೋದರಿ ಹಾಸ್ಟೆಲ್ ಕೇರ್‌ಟೇಕರ್‌ಗೆ ಕರೆ ಮಾಡಿ ಸೋದರನ ಕೋಣೆಗೆ ತೆರಳಲು ಕೋರಿದ್ದಾರೆ. ಕೇರ್‌ಟೇಕರ್ ಬಂದು ಕೋಣೆಯ ಬಾಗಿಲು ತಟ್ಟಿದರೂ ಪ್ರತಿಕ್ರಿಯೆ ಬಾರದಿದ್ದಾಗ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಎಂದು ಅಧಿಕಾರಿ ವಿವರಿಸಿದ್ದಾರೆ. ದೇಶದ ಕೋಚಿಂಗ್ ಕೇಂದ್ರವಾದ ಕೋಟಾದಲ್ಲಿ ಈ ವರ್ಷದ 11ನೇ ವಿದ್ಯಾರ್ಥಿಯ ಆತ್ಮಹತ್ಯೆ ಪ್ರಕರಣವಾಗಿದೆ. ಕಳೆದ ವರ್ಷ 17 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದರು.

ಮಣಿಪುರ: ಉಗ್ರರ ಬಂಧನ, ಶಸ್ತ್ರಾಸ್ತ್ರ ವಶ

ಇಂಫಾಲ: ಮಣಿಪುರದ ಇಂಫಾಲ ಪೂರ್ವ ಜಿಲ್ಲೆಯ ವಿವಿಧೆಡೆ ನಿಷೇಧಿತ ಸಂಘಟನೆಯ ನಾಲ್ವರು ಉಗ್ರರನ್ನು ಭದ್ರತಾ ಪಡೆಗಳು ಬಂಧಿಸಿವೆ. ಪ್ರಿಪಾಕ್(ಪ್ರೊ) ಉಗ್ರ ಸಂಘಟನೆಗೆ ಸೇರಿದ ಒಬ್ಬ ಮಹಿಳೆ ಸೇರಿದಂತೆ ಮೂವರು ಉಗ್ರರನ್ನು ನಗಖಪತ್ ಅಡ್ವೆಂ ಚರ್ ಖರೋಕ್ ಪ್ರದೇಶದಲ್ಲಿ ಸೋಮವಾರ ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ.

ಬಂಧಿತರಿಂದ ಬಂಧೂಕಿನ 5 ಕಾಟ್ರಿಡ್ಜ್, 32 ಪಿಸ್ತೂಲ್, 6 ಮೊಬೈಲ್ ಫೋನ್ ಮತ್ತು ಎರಡು ಮೋಟಾರ್ ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತ ಉಗ್ರರು ಇತ್ತೀಚೆಗೆ ಇಂಫಾಲ ಪೂರ್ವ ಜಿಲ್ಲೆಯ ನವೋರೆಮ್ ಬಿರಾಹರಿ ಕಾಲೇಜಿನ ಬಳಿ ಇಬ್ಬರು ವ್ಯಕ್ತಿಗಳನ್ನು ಅಪಹರಿಸಿದ್ದರು ಎಂದು ಅಧಿಕಾರಿ ವಿವರಿಸಿದ್ದಾರೆ. ಇದಕ್ಕೂ ಮೊದಲು ಮತ್ತೊಬ್ಬ ಉಗ್ರನನ್ನು ಇಂಫಾಲ ಪೂರ್ವ ಜಿಲ್ಲೆಯ ಸಾವೊಂಬಂಗ್‌ನಿಂದ ಭಾನುವಾರ ಬಂಧಿಸಲಾಗಿದೆ. ಇನ್ನೊಂದೆಡೆ, ತೆಂಗ್‌ನೌಪಾಲ್ ಜಿಲ್ಲೆಯ ಯಾಂಗೌಬಂಗ್ ಮತ್ತು ಟಿ ಬೊಂಗ್‌ಮೋಲ್ ಗ್ರಾಮಗಳಲ್ಲಿ ಶನಿವಾರ ಶೋಧ ಕಾರ್ಯಾಚರಣೆ ವೇಳೆ 22 ಐಇಡಿ ಸ್ಫೋಟಕಗಳು, 7 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಅಧಿಕಾರಿ ವಿವರ ನೀಡಿದ್ದಾರೆ.

ತರಬೇತಿ ವಿಮಾನ ಪತನ, ಪೈಲಟ್ ಸಾವು

ಅಮ್ರೇಲಿ: ಖಾಸಗಿ ವಿಮಾನಯಾನ ಅಕಾಡೆಮಿಗೆ ಸೇರಿದ ಪುಟ್ಟ ತರಬೇತಿ ವಿಮಾನ ಗುಜರಾತ್‌ನ ಅಮ್ರೇಲಿ ಜಿಲ್ಲೆಯ ವಸತಿ ಪ್ರದೇಶವೊಂದರಲ್ಲಿ ಮಂಗಳವಾರ

ಮಧ್ಯಾಹ್ನ 12.30ರಲ್ಲಿ ಪತನವಾಗಿದೆ. ಪರಿಣಾಮ ಟ್ರೈನಿ ಪೈಲಟ್ ಸಾವನ್ನಪ್ಪಿದ್ದಾರೆ. ಅಮ್ರೇಲಿ ಪಟ್ಟಣದ ಶಾಸ್ತ್ರಿ ನಗರದ ಬಳಿ ಗಿರಿಯಾ ರಸ್ತೆಯ ವಸತಿ ಪ್ರದೇಶದಲ್ಲಿನ ಮನೆಯೊಂದರ ಹಿತ್ತಿಲಿನಲ್ಲಿರುವ ಮಾವಿನ ಮರದ ಮೇಲೆ ಬಿದ್ದ ವಿಮಾನ ತುಂಡು ತುಂಡಾಗಿ ನೆಲಕ್ಕೆ ಬಿದ್ದಿದೆ. ಪತನವಾದ ವಿಮಾನದಲ್ಲಿ ತರಬೇತಿ ಪೈಲಟ್ ಒಬ್ಬರೇ ಇದ್ದರು. ವಿಮಾನ ಪತನಕ್ಕೆ ಯಾತ್ರಿಕ ಕಾರಣವೋ, ತರಬೇತಿ ನಿರತ ಪೈಲಟ್ ದೋಷವೇ ಕಾರಣವೋ ಎಂಬುದು ತನಿಖೆಯಿಂದ ತಿಳಿದುಬರಬೇಕಿದೆ ಎಂದು ಅಮ್ರೇಲಿ ಪೊಲೀಸ್ ವರಿಷ್ಠಾಧಿಕಾರಿ ಸಂಜಯ್ ಖಾರತ್ ತಿಳಿಸಿದ್ದಾರೆ.

ಒಂದೇ ಎಂಜಿನ್‌ನ ಪುಟ್ಟ ವಿಮಾನ ಅಮ್ರೇಲಿ ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಿತು. ವಿಮಾನ ಪತನವಾದ ಜಾಗದಲ್ಲಿ ಮನೆಗಳಿದ್ದರೂ ಬೇರಾರಿಗೂ ಹಾನಿ ಆಗಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಗ್ರಾಪಂ ಉಪ ಚುನಾವಣೆ ಮುಂದೂಡಿಕೆ: ಡಿಸಿ

ಧಾರವಾಡ: ಜಿಲ್ಲೆಯಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ, ಖಾಲಿಯಿರುವ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆಯನ್ನು ಜರುಗಿಸಲು ರಾಜ್ಯ ಚುನಾವಣೆ ಆಯೋಗವು ಆದೇಶಿಸಿ ವೇಳಾಪಟ್ಟಿಯೊಂದಿಗೆ ಸೂಚಿಸಿತ್ತು. ಆದರೆ ರಾಜ್ಯ ಚುನಾವಣೆ ಆಯೋಗವು ಸದರಿ ಗ್ರಾಮ ಪಂಚಾಯಿತಿ ಉಪ ಚುನಾವಣೆಗಳನ್ನು 15 ದಿನಗಳ ಮಟ್ಟಿಗೆ ಮುಂದೂಡಿ ಇಂದು ಆದೇಶಿಸಿದೆ. ಕಾರಣ ಈ ಕುರಿತು ಉಪ ಚುನಾವಣೆಯನ್ನು ಜರುಗಿಸುವ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರಚುರ ಪಡಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಶಂಕರಾಚಾರ್ಯ ಜಯಂತಿ ಸಿದ್ಧತಾ ಸಭೆ

ಗದಗ: ಸರಕಾರದ ಆದೇಶದನ್ವಯ ಈ ವರ್ಷವು ಮೇ 2ರಂದು ಆಚರಿಸಲಾಗುವ ಶ್ರೀ ಜಗದ್ಗುರು ಶಂಕರಾಚಾರ್ಯ ಜಯಂತಿಯ ನಿಮಿತ್ತ ಏ.23 ರಂದು ಸಂಜೆ 4.30 ಗಂಟೆಗೆ ಅಪರ ಜಿಲ್ಲಾಧಿಕಾರಿಗಳು ಗದಗ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ. ತಾವು ಸಭೆಗೆ ಹಾಜರಾಗಿ ಸಲಹೆ, ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಘಾಟನೆಗೆ ಸಿದ್ಧವಾಗುತ್ತಿರುವ ರಾಜ್ಯದ ಗಂಡು ಮೆಟ್ಟಿದ ನಾಡಿನ ಪ್ರಮುಖ ವೃತ್ತ

ಹುಬ್ಬಳ್ಳಿ ಚನ್ನಮ್ಮ ವೃತ್ತ ಕಾಮಗಾರಿ ವೇಗ ಆಮೆ ಗತಿ

ಮಹಾಂತೇಶ ಕಂಬಳಿ ಹುಬ್ಬಳ್ಳಿ

ರಾಜ್ಯದ 2 ನೇ ರಾಜಧಾನಿ ಎನಿಸಿಕೊಂಡಿರುವ ಛೋಟಾ ಮುಂಬೈ ಹುಬ್ಬಳ್ಳಿಯಲ್ಲಿ, ಅತ್ಯಂತ ಹೈಟೆಕ್ ಮಾದರಿಯಲ್ಲಿ ಚನ್ನಮ್ಮ ವೃತ್ತ ಸಿದ್ಧವಾಗುತ್ತಿದೆ. ಇದಕ್ಕಾಗಿ ಭರದ ಸಿದ್ಧತೆ ನಡೆದಿದೆ. ವಿಶ್ವವಾಣಿ ಪತ್ರಿಕೆಗೆ ಚೆನ್ನಮ್ಮ ವೃತ್ತದ ನೀಲನಕ್ಷೆ ಲಭ್ಯವಾಗಿದೆ. ಆದರೆ ಸಂಚಾರಕ್ಕಾಗಿ ಸಾರ್ವಜನಿಕರಿಗೆ ಸದ್ಯಕ್ಕೆ 4 ತಿಂಗಳು ಕಾಲ, ಬಹು ದೊಡ್ಡ ಸಮಸ್ಯೆಯಾಗಿ ತಲೆನೋವಾಗಿ ಹೋಗಿದೆ.

ಫ್ಲೈ ಓವರ್ ಕಾಮಗಾರಿ ನಾಲ್ಕು ತಿಂಗಳು ಮುಗಿಸುತ್ತಾರೆ ಎಂಬ ವಿಶ್ವಾಸ ಇಲ್ಲ. ಇಲ್ಲಿಯವರೆಗೂ ಮಾಡಲು 5 ವರ್ಷ ತಗೆದುಕೊಂಡಿದ್ದಾರೆ. 1ಕಿ.ಮೀ ಮಾಡಲು ವರ್ಷ ತೆಗೆದುಕೊಂಡವರು, ಇನ್ನು ಕಾಮಗಾರಿ ಮುಗಿಸಲು ಎಷ್ಟು ದಿನ ತಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಇದರಿಂದ ಬೀದಿ ಬದಿ ವ್ಯಾಪಾರಿಗಳು, ಆಟೋ ಚಾಲಕರು ಸಾರ್ವಜನಿಕರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಬೇಗ ಕಾಮಗಾರಿ ಮುಗಿಸಿದರೆ ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಗಲಿದೆ.

-ಉದಯಕುಮಾರ್ ರೊಕಡೆ, ಹುಬ್ಬಳ್ಳಿ ವ್ಯಾಪಾರಿ

ನಗರದ ಚನ್ನಮ್ಮ ವೃತ್ತದ ಕಾಮಗಾರಿ ಭರದಿಂದ ಸಾಗಿದೆ. ಪೂರ್ವ ನಿಗದಿಯಂತೆ ಪ್ಲೈಓವರ್ ಕಾಮಗಾರಿ ಹಿನ್ನೆಲೆ ಚೆನ್ನಮ್ಮ ವೃತ, ಹಳೇ ಬಸ್ ನಿಲ್ದಾಣ ಹಾಗೂ ಬಸವನ ಮಾರ್ಗ 4 ತಿಂಗಳ ಕಾಲ ತಾತ್ಕಾಲಿಕವಾಗಿ ಬಂದ್ ಮಾಡಲಾಗಿದ್ದು, ವಾಹನ ಸವಾರರು, ಪ್ರಯಾಣಿಕರು ತಮ್ಮ ಊರುಗಳಿಗೆ ತೆರಳಲು ಸಮಸ್ಯೆ ಅನುಭವಿಸುತ್ತಿದ್ದಾರೆ.

ಹುಬ್ಬಳ್ಳಿಯಲ್ಲಿ ಕೆಲವೊಂದು ಕಡೆ ಲಘು ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ. ನೀಲಿ ಜಿನ್ ರಸ್ತೆಯನ್ನು ಕೇವಲ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಈ ಮಾರ್ಗದಲ್ಲಿ ಲಘು ವಾಹನಗಳಿಗೆ ಪ್ರವೇಶವಿಲ್ಲ. ಇನ್ನೂ ಕಮರಿಪೇಟೆ ಪೊಲೀಸ್ ಠಾಣೆಯಿಂದ ಚನ್ನಮ್ಮ ವೃತ್ತ ಕಡೆಗೆ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

ಸಂಸದರು ಹಾಗೂ ಕೇಂದ್ರ ಸಚಿವರು ಆಗಿರುವ ಪ್ರಹ್ಲಾದ ಜೋಶಿ ಅವರ ವಿಶೇಷ ಕಾಳಜಿಯಿಂದ ಕಾಮಗಾರಿ ಆದಷ್ಟು ಬೇಗ ಮುಕ್ತಾಯವಾಗಲಿದೆ ಎನ್ನುವ ವಿಶ್ವಾಸ ಹುಬ್ಬಳ್ಳಿ ಜನರಲ್ಲಿದೆ. ಈ ಮಾತನ್ನು ಕೇಂದ್ರ ಸಚಿವರು ಯಾವ ರೀತಿ ಉಳಿಸಿಕೊಳ್ಳಲಿದ್ದಾರೆ ಎನ್ನುವುದು ಇದೀಗ ಎಲ್ಲರಲ್ಲೂ ಮೂಡಿರುವ ಅತಿದೊಡ್ಡ ಪ್ರಶ್ನೆಯಾಗಿದೆ.

ಹುಬ್ಬಳ್ಳಿಯಲ್ಲಿ ಚೆನ್ನಮ್ಮ ವೃತ್ತದಲ್ಲಿ ಕಾಮಗಾರಿ ಆರಂಭವಾಗಿ, ಸಂಚಾರಕ್ಕೆ ಅಡೆತಡೆ ಉಂಟಾಗಿರುವ ದೃಶ್ಯ.

ಹುಬ್ಬಳ್ಳಿಯಲ್ಲಿ ಮುಂದಿನ ವರ್ಷ ಉದ್ಘಾಟನೆಗೆ ಸಿದ್ಧವಾಗಿರುವ ಚೆನ್ನಮ್ಮ ವೃತ್ತದ ನೀಲನಕ್ಷೆ.

- ಗದಗನಿಂದ ಧಾರವಾಡ ಕಡೆಗೆ- ಸ್ಟೇಶನ್ ರಸ್ತೆ, ಕಾರವಾರ ರಸ್ತೆ, ಭಾರತ ಮಿಲ್ (ಗಿರಣಿಚಾಳ), ವಾಣಿ ವಿಲಾಸ ವೃತ್ತ ಮಾರ್ಗವಾಗಿ ಧಾರವಾಡ ಕಡೆಗೆ ಸಂಚರಿಸಬಹುದು.
- ವಿಜಯಪುರದಿಂದ ಧಾರವಾಡ ಕಡೆಗೆ- ಕೇಶ್ವಾಪುರ ಸರ್ವೋದಯ ವೃತ್ತದಿಂದ ರೈಲ್ವೆ ಡಿಆರ್‌ಎಂ ಕಚೇರಿ, ಸ್ಟೇಶನ್ ರಸ್ತೆ, ಸರ್ ಸಿದ್ದಪ್ಪ ಕಂಬಳಿ ಮಾರ್ಗ, ಕಿತ್ತೂರು ಚನ್ನಮ್ಮ ವೃತ್ತ, ಕಾರವಾರ ರಸ್ತೆ, ಭಾರತ ಮಿಲ್ (ಗಿರಣಿಚಾಳ), ವಾಣಿ ವಿಲಾಸ ವೃತ್ತ ಮಾರ್ಗವಾಗಿ ಧಾರವಾಡ ಕಡೆಗೆ ಸಂಚರಿಸಬಹುದು.

50 ಕೋಟಿ ವೆಚ್ಚದ ಬಸ್ ನಿಲ್ದಾಣವೂ ಬಂದ್

ಚೆನ್ನಮ್ಮ ವೃತ್ತ ಬಂದ್ ಮಾಡಿದ್ದರ ಪರಿಣಾಮ ನೂತನವಾಗಿ ಇತ್ತೀಚೆಗೆ ಸ್ಮಾರ್ಟ್ ಸಿಟಿ ಯೋಜನೆಯಡಿ 50 ಕೋಟಿ ವೆಚ್ಚದಲ್ಲಿ ಮರುನಿರ್ಮಾಣ ಮಾಡಿದ ಹಳೇ ಬಸ್ ನಿಲ್ದಾಣ ಬಂದ್ ಆಗಿದ್ದು, ಪ್ರಯಾಣಿಕರು ಸಮಸ್ಯೆ ಎದುರಿಸುತ್ತಿದ್ದಾರೆ. ಪರ್ಯಾಯವಾಗಿ ಐಟಿ ಪಾರ್ಕ್ ಮುಂದೆ ತಾತ್ಕಾಲಿಕ ಬಸ್ ನಿಲ್ದಾಣ ಸ್ಥಳಾಂತರ ಮಾಡಲಾಗಿದೆ. ಈ ಬಗ್ಗೆ ಇನ್ನೂ ಕೆಲ ಪ್ರಯಾಣಿಕರಿಗೆ ಮಾಹಿತಿ ಇಲ್ಲದೆ ಚನ್ನಮ್ಮ ವೃತ್ತದ ಬಳಿ ಪ್ರಯಾಣಿಕರು ಕಾಯುವ ದೃಶ್ಯ ಸಾಮಾನ್ಯವಾಗಿದೆ.

ನಿತ್ಯವೂ ಉಪನಗರ ಸಾರಿಗೆ ಹಾಗೂ ಗ್ರಾಮಾಂತರ ಸಾರಿಗೆ ನಿಲ್ದಾಣಕ್ಕೆ, 4 ಸಾವಿರಕ್ಕೂ ಅಧಿಕ ಟ್ರೇಕ್ ಬಸ್ ಓಡಿಸಲಾಗುತ್ತಿದೆ. ಜತೆಗೆ ಇತ್ತೀಚೆಗಷ್ಟೇ ಕಾರ್ಯಾರಂಭ ಮಾಡಿದ್ದರಿಂದ ಸಾಕಷ್ಟು ಬೆಲೆ ಬಾಳುವ ಪರಿಕರಗಳ ರಕ್ಷಣೆ ಈಗ ಸಾರಿಗೆ ಅಧಿಕಾರಿಗಳಿಗೆ ದೊಡ್ಡ ಸವಾಲಾಗಿದೆ. ಪ್ಲೈ ಓವರ್ ಕಾಮಗಾರಿ ಹಿನ್ನೆಲೆಯಲ್ಲಿ ಏ.20ರಿಂದ ಹಳೇ ಬಸ್ ನಿಲ್ದಾಣವನ್ನು 4 ತಿಂಗಳ ಕಾಲ ತಾತ್ಕಾಲಿಕವಾಗಿ ಬಂದ್ ಮಾಡಲಾಗುತ್ತಿದೆ. ಈ ಬಸ್‌ಗಳಿಗೆ ಬೇರೆಡೆ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಹಳೇ ಬಸ್ ನಿಲ್ದಾಣದ ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

-ಪ್ರಿಯಾಂಗ ಎಂ,
ವಾಯುವ್ಯ ಸಾರಿಗೆ ವ್ಯವಸ್ಥಾಪಕ ನಿರ್ದೇಶಕಿ

ಹಳೇ ಬಸ್ ನಿಲ್ದಾಣ ಬಂದ್ ಮಾಡಿದ್ದರಿಂದ, ಗ್ರಾಮೀಣ ಭಾಗದ ಜನರು ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಗ್ರಾಮೀಣ ಭಾಗದ ಬಸ್‌ಗಳು ಖಾಲಿ ಬಸ್‌ಗಳು ಊರಿಗೆ ಹೋಗಿವೆ. ಯಾವ ಬಸ್ ಎಲ್ಲಿ ನಿಲ್ಲುತ್ತವೆ ಎಂಬ ಮಾಹಿತಿ ಇನ್ನೂ ಜನರಿಗೆ ಇಲ್ಲ. ಹೀಗಾಗಿ ಸರಿಯಾದ ಮಾಹಿತಿ ನೀಡಬೇಕು.

-ಸದಾನಂದ
ಅಣ್ಣಿಗೇರಿ,
ಪ್ರಯಾಣಿಕರು

ಪರ್ಯಾಯ ಮಾರ್ಗ ವ್ಯವಸ್ಥೆ

ಧಾರವಾಡದಿಂದ ವಿಜಯಪುರ ಮತ್ತು ಗದಗ ಕಡೆಗೆ ಸಂಚರಿಸುವ ವಾಹನಗಳು ಹೊಸೂರು ವೃತ್ತದಿಂದ ಕಾಟನ್ ಮಾರ್ಕೆಟ್, ಶಾರದಾ ಹೋಟೆಲ್, ದೇಸಾಯಿ-ವೃತ್ತ, ಪಿಂಟೋ ವೃತ್ತ ಮೂಲಕ ಗದಗ ಇಲ್ಲವೆ ವಿಜಯಪುರಕ್ಕೆ ಸಂಚರಿಸಬಹುದು ಅಥವಾ ವಾಹನಗಳು ಕೋರ್ಟ್ ವೃತ್ತ ಮಾರ್ಗವಾಗಿ ಸಾಯಿ ಮಂದಿರ ಮೂಲಕವೂ ಸಂಚರಿಸಬಹುದಾಗಿದೆ. ಹೊಸೂರು ವೃತ್ತದಿಂದ ಕಾಟನ್ ಮಾರ್ಕೆಟ್, ನೀಲಿ ಜಿನ್ ರಸ್ತೆ, ಕಿತ್ತೂರು ಚನ್ನಮ್ಮ ವೃತ್ತ, ಸರ್ ಸಿದ್ದಪ್ಪ ಕಂಬಳಿ ಮಾರ್ಗವಾಗಿ ಗದಗ, ವಿಜಯಪುರ ಹಾಗೂ ಸಿಬಿಟಿ ಕಡೆಗೆ ಸಂಚರಿಸಬಹುದು.

ದೇಶದ ಬಗ್ಗೆ ರಾಹುಲ್ ಹೇಳಿಕೆ ಮೂರ್ಖತನ ಪರಮಾವಧಿ

ಗದಗ: ವಿದೇಶದಲ್ಲಿ ನಿಂತು ರಾಹುಲ್ ಗಾಂಧಿ ಭಾರತದ ಆಡಳಿತದ ಬಗ್ಗೆ ಮಾತನಾಡುತ್ತಿರುವುದು ಮೂರ್ಖತನದ ಪರಮಾವಧಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊರದೇಶಕ್ಕೆ ಹೋದಾಗ ದೇಶದ ಬಗ್ಗೆ ಹೇಗೆ ನಡೆದುಕೊಳ್ಳಬೇಕು. ಮಹಾರಾಷ್ಟ್ರದಲ್ಲಿ ಅವರಿಗೆ ಹಿನ್ನಡೆ ಆಗಿದ್ದರೆ ಸಂಸತ್ ಸದನದಲ್ಲಿ ನಮ್ಮ ದೇಶದಲ್ಲಿ ಮಾತನಾಡಬಹುದು. ಮಹಾರಾಷ್ಟ್ರದಲ್ಲಿ ಚುನಾವಣಾ ಆಯೋಗ ಬಿಜೆಪಿಗೆ ಸಹಕಾರ ಕೊಟ್ಟಿದೆ. ಕಾಂಗ್ರೆಸ್‌ಗೆ ಮೋಸ ಆಗಿದೆ ಅಂದರೆ ತೆಲಂಗಾಣದಲ್ಲೂ ಮೋಸ ಮಾಡಬಹುದಿತ್ತಲ್ಲ? ಎಂದು ಪ್ರಶ್ನಿಸಿದರು.

ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ 48ಕ್ಕೂ ಹೆಚ್ಚು ಅಗತ್ಯ ವಸ್ತುಗಳ ಬೆಲೆಯನ್ನು ನಿರಂತರವಾಗಿ ಏರಿಕೆ ಮಾಡಿಕೊಂಡು ಬರುತ್ತಿದೆ. ಬೆಲೆ ಏರಿಕೆ ಪರಿಣಾಮ ಇಡೀ ದೇಶದಲ್ಲಿ ಕರ್ನಾಟಕ ಬಹಳಷ್ಟು ದುಬಾರಿ ರಾಜ್ಯ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮ, ಮೂಡಾ ಸೇರಿ ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿಮೀರಿ ಹೋಗಿದೆ.

ಈ ಹಿಂದೆ ಕಾಂಗ್ರೆಸ್ ದಲಿತ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರ ಮನೆಗೆ ದೇಶದ್ರೋಹಿಗಳು ನುಗ್ಗಿ ಬೆಂಕಿ ಹಚ್ಚಿದ್ದಾಗಲೇ ಸಿಎಂ ಸಿದ್ದರಾಮಯ್ಯ ಅವರು ದಲಿತ ಶಾಸಕನ ರಕ್ಷಣೆಗೆ ಬರಲಿಲ್ಲ. ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಲವ್ ಜಿಹಾದ್, ಗೋಹತ್ಯೆ, ಪರೀಕ್ಷೆ ವೇಳೆ ಹೆಣ್ಣುಮಕ್ಕಳ ತಾಳಿಯನ್ನು ಬಿಚ್ಚಿಡಿಸುವಂತಹ ದುರ್ಘಟನೆಗಳು ನಡೆದಿವೆ.

ಹಿಮಾಚಲದಲ್ಲಿ ಕಾಂಗ್ರೆಸ್ ಸರಕಾರ ಆಡಳಿತದಲ್ಲಿದೆ. ಅಲ್ಲೂ ಕೂಡಾ ಬಿಜೆಪಿ ಅಧಿಕಾರಕ್ಕೆ ಬರಬಹುದಿತ್ತು. ಹಿಮಾಚಲ, ತೆಲಂಗಾಣದಲ್ಲಿ ಗೆದ್ದಾಗ ಒಂದು ಮಾನದಂಡ. ಮಹಾರಾಷ್ಟ್ರ, ಹರಿಯಾಣಾದಲ್ಲಿ ಚುನಾವಣೆ ಸೋತಾಗ ಅವರಿಗೆ ಚುನಾವಣಾ ಆಯೋಗದ ಬಗ್ಗೆ ಅನುಮಾನಗಳು ಪ್ರಾರಂಭವಾಗುತ್ತವೆ. ಅಮೇರಿಕಾದಲ್ಲಿ ನಿಂತು ಭಾರತದ ಚುನಾವಣೆ ಬಗ್ಗೆ ಮಾತನಾಡೋದು ಮೂರ್ಖತನದ ಪರಮಾವಧಿ.

-ಬಿ.ವೈ.ವಿಜಯೇಂದ್ರ,
ಬಿಜೆಪಿ ರಾಜ್ಯಾಧ್ಯಕ್ಷ

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣ ಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಬಿಸಿಲಿನ ತಾಪ ಏರುತ್ತಿರುವಂತೆ ರಾಜ್ಯ ಸರಕಾರದ ಬಗ್ಗೆ ಜನಾಕ್ರೋಶವೂ ಏರುತ್ತಿದೆ. ಹಾಲಿನಿಂದ ಆಲ್ಕೋಹಾಲ್ ವರೆಗೆ ಎಲ್ಲ ವಸ್ತುಗಳ ಬೆಲೆ ಏರಿಕೆಯಾಗಿದ್ದು, ಜನರು ಆಕ್ರೋಶಗೊಂಡಿದ್ದಾರೆ ಎಂದರು.

ಜಾತಿ ಜನಗಣತಿ ಹೆಸರಿನಲ್ಲಿ ಪರಿಶಿಷ್ಟ ಜಾತಿಯನ್ನು ತುಂಡು ತುಂಡು ಮಾಡಿದ್ದಾರೆ. ನಮ್ಮಲ್ಲಿ ಇರುವುದೇ 101 ಜಾತಿಗಳು. ಆದರೆ, ಜಾತಿ ಜನಗಣತಿ ಸಂದರ್ಭದಲ್ಲಿ 81 ಜಾತಿಗಳನ್ನು ಹೆಚ್ಚು ಮಾಡಿದ್ದಾರೆ ಎಂದು ಹರಿಹಾಯ್ದರು.

ಶಾಸಕ ಜನಾರ್ದನ ರೆಡ್ಡಿ ಮಾತನಾಡಿ, ಕಾಂಗ್ರೆಸ್ ಸರಕಾರ ಜನರಿಗೆ ಪಂಚ ಗ್ಯಾರಂಟಿ ಹೆಸರಿನಲ್ಲಿ ಸ್ವಲ್ಪ ಹಣ ಕೊಟ್ಟು, ಎಲ್ಲ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ 10 ಕೈಗಳಿಂದ ಜನರ ಜೇಬಿಗೆ ಕೈಹಾಕಿ ಹಣ ಕಸಿಯುತ್ತಿದೆ ಎಂದು ಆರೋಪ ಮಾಡಿದರು.

ವಕ್ಫ್ ಕಾಯಿದೆ ತಿದ್ದುಪಡಿ ವಿಚಾರದಲ್ಲಿ ಅಮಾಯಕ ಮುಸ್ಲಿಂ ಜನರನ್ನು ಬೀದಿಗಿಳಿಸಿ ಹೋರಾಟ ಮಾಡಿಸುತ್ತಿದ್ದಾರೆ. ಮುಸ್ಲಿಮರನ್ನು ರೋಡಿಗಿಳಿಸುವ ಮೂಲಕ ಅವರೇ ಹಿಂದೂಗಳನ್ನು ಒಗ್ಗೂಡಿಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಶಾಸಕ ಡಾ. ಚಂದ್ರು ಲಮಾಣಿ ಮಾತನಾಡಿ, ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ವರ್ಷದಲ್ಲಿ ಮೂರು ಬಾರಿ ಹಾಲಿನ ದರ ಏರಿಸಿದ್ದು, ಬಡ ಹಾಗೂ ಮಧ್ಯಮವರ್ಗದ ಜನರು ಸರಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ 42 ಸಾವಿರ ಕೋಟಿ ಹಣವನ್ನು ಗ್ಯಾರಂಟಿಗಳಿಗೆ ಬಳಸಿದ್ದಾರೆ.

ಇಂತಹ ಸರಕಾರದ ವಿರುದ್ಧ ಜನರು ರೊಚ್ಚಿಗೆದ್ದಿದ್ದು, ಮುಂದೆ ಬಿಜೆಪಿ ಸರಕಾರ ಆಡಳಿತಕ್ಕೆ ಬರುವುದು ನಿಶ್ಚಿತ ಎಂದರು. ಶಾಸಕ ಸಿ.ಸಿ.ಪಾಟೀಲ ಮಾತನಾಡಿ, ಪಂಚ ಗ್ಯಾರಂಟಿಗಳ ಮೂಲಕ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ಈಗ ಜನರ ರಕ್ತಹೀರುತ್ತಿದೆ. 48 ಅಗತ್ಯವಸ್ತುಗಳ ಬೆಲೆ ಏರಿಕೆ ಮಾಡಿದ್ದಾರೆ. ಕಸಕ್ಕೂ ತೆರಿಗೆ ವಿಧಿಸುತ್ತಿದ್ದಾರೆ. ಅವಧಿ ಪೂರ್ಣಗೊಳಿಸುವ ವೇಳೆಗೆ 10 ಲಕ್ಷ ಕೋಟಿ ಸಾಲ ಮಾಡಿ ರಾಜ್ಯವನ್ನು ದಿವಾಳಿ ಮಾಡುತ್ತಾರೆ. ಇಂತಹ ಸರಕಾರವನ್ನು ಜನರು ಕಿತ್ತೊಗೆಯಬೇಕು ಎಂದು ಆಗ್ರಹಿಸಿದರು.

ಕುಡಿಯುವ ನೀರಿನ ಸಮಸ್ಯೆ ತಡೆಯಿರಿ: ಸಚಿವ

ಧಾರವಾಡ: ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಾಲ್ಕನೇಯ ತ್ರೈಮಾಸಿಕ ಕೆಡಿಪಿ ಸಭೆಯನ್ನು ಸಚಿವ ಸಂತೋಷ್ ಲಾಡ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಜಿಲ್ಲೆಯ ವಿವಿಧ ಇಲಾಖೆಗಳ ಕಾಮಗಾರಿಗಳ ಪ್ರಗತಿ ಸಭೆಯನ್ನು ಲಾಡ್ ಅವರು ಪ್ರತಿಯೊಬ್ಬ ಇಲಾಖಾ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಅಧಿಕಾರಿಗಳು ಕೆಲಸ ಮಾಡಬೇಕು ಎಂದು ಎಲ್ಲ ಇಲಾಖೆಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಕೆಡಿಪಿ ಸಭೆಗೆ ತಪ್ಪು ತಪ್ಪು ಮಾಹಿತಿ ನೀಡಿದ್ದಲ್ಲದೆ ಸಭೆಗೆ ಬಾರದ ಕಾರಣಕ್ಕೆ ಸಸ್ಪೆಂಡ್ ಮಾಡಿ ಅಮಾನತ್ತು ಮಾಡಿ ಆದೇಶ ಕಳುಹಿಸಿ ಎಂದರು. 117 ಕಾಮಗಾರಿ ಗುರಿಯಲ್ಲಿ ಕೇವಲ 12 ಮಾತ್ರ ಪೂರ್ಣ ಮಾಡಿದ್ದ ಅಧಿಕಾರಿ ಈ ಹಿನ್ನೆಲೆ ಸಸ್ಪೆಂಡ್ ಮಾಡಿ ಆದೇಶ ನೀಡಿ ಎಂದು ಫೋನ್ ಮೂಲಕ ಸಚಿವರು ಹೇಳಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ದಿವ್ಯ ಪ್ರಭು, ಸಿಇಒ ಭುವನೇಶ್, ಪಾಲಿಕೆ ಕಮಿಷನರ್ ರುದ್ರೇಶ್ ಗಾಳಿ, ಪೊಲೀಸ್ ಕಮಿಷನರ್ ಎನ್ ಶಶಿಕುಮಾರ, ಎಸ್ಪಿ ಗೋಪಾಲ ಬ್ಯಾಕೋಡ್ ಭಾಗಿಯಾಗಿದ್ದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಾಲ್ಕನೇಯ ತ್ರೈಮಾಸಿಕ ಕೆಡಿಪಿ ಸಭೆಯನ್ನು ಸಚಿವ ಸಂತೋಷ್ ಲಾಡ್ ಅವರ ನೇತೃತ್ವದಲ್ಲಿ ನಡೆಯಿತು.

ಜನತಾ ದರ್ಶನದಲ್ಲಿ 125 ಅಹವಾಲು ಸಲ್ಲಿಕೆ

ಧಾರವಾಡ: ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು 9ನೇ ಜನತಾ ದರ್ಶನವನ್ನು ಜಿಪಂ ಸಭಾಂಗಣದಲ್ಲಿ ನಡೆಸಿ, ಸಾರ್ವಜನಿಕರಿಂದ 125 ದೂರು, ಅಹವಾಲುಗಳನ್ನು ಸ್ವೀಕರಿಸಿದರು. ಇವುಗಳಲ್ಲಿ ಕಂದಾಯ 31, ಮಹಾನಗರ ಪಾಲಿಕೆ 26, ಜಿಲ್ಲಾ ಪಂಚಾಯಿತಿ 18, ಕಾರ್ಮಿಕ ಇಲಾಖೆ 16, ಪೊಲೀಸ್ ಇಲಾಖೆ 6, ಶಿಕ್ಷಣ ಇಲಾಖೆ 5 ಮತ್ತು ಇತರೆ 23 ಅಹವಾಲುಗಳು ಸೇರಿ ಒಟ್ಟು 125 ದೂರುಗಳಿವೆ. ಇವುಗಳನ್ನು ಸೂಕ್ತವಾಗಿ, ನಿಯಮಾನುಸಾರ ಪರಿಶೀಲಿಸಿ ಕಾಲಮಿತಿಯಲ್ಲಿ ವಿಲೇವಾರಿ ಮಾಡುವಂತೆ ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕಳೆದ 8 ಜನತಾ ದರ್ಶನಗಳಲ್ಲಿ ಸಾರ್ವಜನಿಕರಿಂದ ಒಟ್ಟು 1,655 ಅಹವಾಲುಗಳನ್ನು ಸ್ವೀಕರಿಸಿ, ಸೂಕ್ತವಾಗಿ ವಿಲೇವಾರಿ ಮಾಡಲಾಗಿದೆ ಎಂದರು.

ಸಭೆಗೆ ಗೈರಾದ ಅಧಿಕಾರಿ ಅಮಾನತು ಮಾಡಿ ಸಚಿವ ಆದೇಶ

ಸಚಿವರ ಕೆಡಿಪಿ ಸಭೆಯಲ್ಲಿ ದಕ್ಷತೆ ಮರೆತ ಅಧಿಕಾರಿಯನ್ನು ತಕ್ಷಣವೇ ಅಮಾನತು ಮಾಡುವಂತೆ ಇಲಾಖೆಯ ಸಚಿವರಿಗೆ ಫೋನ್ ಮೂಲಕ ಹೇಳಿದ ಘಟನೆ ನಡೆಯಿತು. ಸಣ್ಣ ನೀರಾವರಿ ಇಲಾಖೆಯ ಎಕ್ಸಿಕ್ಯುಟಿವ್ ಎಂಜಿನಿಯರ್ ದೇವರಾಜ ಶಿಗ್ಗಾಂವಿ ಸಸ್ಪೆಂಡ್ ಮಾಡಿ ಎಂದು ನೀರಾವರಿ ಸಚಿವ ಬೋಸರಾಜ್‌ರಿಗೆ ಕರೆ ಮಾಡಿ ಸಂತೋಷ ಲಾಡ್ ಅವರು ಹೇಳಿದರು.

ಸರಕಾರದಿಂದ ರಿಕ್ಕಿ ರೈಗೆ ಭದ್ರತೆ ನೀಡಲು ಒತ್ತಾಯ

ಗಜೇಂದ್ರಗಡ: ಜಯ ಕರ್ನಾಟಕ ಸಂಘಟನೆ ಸಂಸ್ಥಾಪಕ ದಿ. ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ಗುಂಡಿನ ದಾಳಿ ನಡೆಸಿದ ದುಷ್ಕರ್ಮಿಗಳನ್ನು ತಕ್ಷಣವೇ ಬಂಧಿಸಬೇಕು ಮತ್ತು ಸರಕಾರದಿಂದ ರಿಕ್ಕಿ ರೈಗೆ ಸೂಕ್ತ ಭದ್ರತೆ ನೀಡಬೇಕೆಂದು ಒತ್ತಾಯಿಸಿ ಪಟ್ಟಣದಲ್ಲಿ ಜಯ ಕರ್ನಾಟಕ ಸಂಘಟನೆ ಕಾರ್ಯಕರ್ತರು ತಹಸೀಲ್ದಾರ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಿದರು.

ಜಯ ಕರ್ನಾಟಕ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ದಿ.ಮುತ್ತಪ್ಪ ರೈ ರವರ ಕಿರಿಯ ಪುತ್ರ ರಿಕ್ಕಿ ರೈ ರವರ ಮೇಲೆ ಮಧ್ಯರಾತ್ರಿಯಲ್ಲಿ ದುಷ್ಕರ್ಮಿ ಗಳು ಗುಂಡಿನ ದಾಳಿ ನಡೆಸಿದ್ದಾರೆ. ಈ ಘಟನೆ ಬಿಡದಿಯ ಮುತ್ತಪ್ಪ ರೈ ಅವರ ನಿವಾಸದ ಮುಂದೆಯೇ ನಡೆದಿದ್ದು, ದುಷ್ಕರ್ಮಿಗಳು ಡ್ರೈವಿಂಗ್ ಸೀಟ್ ಗುರಿಯಾಗಿಸಿ ಮೂರು ಸುತ್ತು ಗುಂಡುಗಳನ್ನು ಹಾರಿಸಿದ್ದಾರೆ. ಕಾರ್‌ನ ದಾಳಿಕೋರರು ಡ್ರೈವಿಂಗ್ ಸೀಟಿನ ಮೇಲೆ ಗುರಿ ಇಟ್ಟಿದ್ದರು. ಆದರೆ ಈ ಬಾರಿ ಕಾರನ್ನು ಚಾಲಕ ರಾಜು ಚಲಾಯಿಸುತ್ತಿದ್ದು, ಗುಂಡಿನ ದಾಳಿಯ ವೇಳೆ ರಾಜು ಮುಂದೆ ಬಗ್ಗಿದ್ದರಿಂದ ಕೂದಲೆಳೆಯ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಆದರೆ ಪಕ್ಕದ ಸೀಟ್‌ನಲ್ಲಿದ್ದ ರಿಕ್ಕಿ ರೈ ರವರ ಮೂಗು ಮತ್ತು ಕೈಗೆ ಗುಂಡು ತಾಕಿದೆ ಗಂಭೀರ ಗಾಯಗೊಂಡಿದ್ದಾರೆ. ಜತೆ ಇರುವ ಮತ್ತೊಬ್ಬರಿಗೆ ಸಣ್ಣ ಪುಟ್ಟ ಗಾಯವಾಗಿದೆ.

ದಾಳಿ ನಡೆಸಿದ ದುಷ್ಕರ್ಮಿಗಳನ್ನು ರಾಜ್ಯ ಸರಕಾರ ತಕ್ಷಣ ಬಂದಿಸಬೇಕು. ದಾಳಿಯ ಹಿಂದಿನ ಕಾಣದ ಕೈವಾಡಗಳು ಯಾರದು ಇವೆ ಎನ್ನುವು ದನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು. ನಾಡು ನುಡಿ, ಸೇವೆ ಮಾಡುತ್ತಿರುವ ರಿಕ್ಕಿ ರೈ ಅವರ ಮೇಲೆ ನಡೆದ ದಾಳಿ ಖಂಡನೀಯವಾಗಿದ್ದು, ರಾಜ್ಯ ಸರಕಾರ ಸೂಕ್ತ ಭದ್ರತೆ ನೀಡಬೇಕು ಎಂದು ಒತ್ತಾಯಿಸಿದರು.

ಸಂಘಟನೆಯ ಶರಣು ಹಲಗಿ, ಮಹಮ್ಮದಗೌಸ್ ಅಕ್ಕಿ, ದಾವಲಸಾಬ ಮಳಗಾವಿ, ಕರಿಯಪ್ಪ ಮಾದರ, ಮಾಬೂಸಾಬ ಡಾಲಾಯತ್, ರಮೇಶ ತಳವಾರ, ಸಾದೀಕ್ ಮೊ ಮೀನ್, ಶರಣಪ್ಪ ಮುಗಳಿ, ಮೆಹಬೂಬ ಅತ್ತಾರ, ವಿನೂದ ಮಾದರ, ಯಲ್ಲಪ್ಪ ಮಾದರ, ಮುತ್ತ ಯ್ಯ ಬಿನ್ನಾಳಮಠ, ಖಾಜೇಸಾಬ ಡಾಲಾಯತ್, ಮಂಜುನಾಥ ಮಾದರ ಇದ್ದರು.

ಪಟ್ಟಣದಲ್ಲಿ ಜಯ ಕರ್ನಾಟಕ ಸಂಘಟನೆ ಕಾರ್ಯಕರ್ತರು ತಹಸೀಲ್ದಾರ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿರಾಮ
ಪ್ರತಿ ಭಾನುವಾರ

IIFL FINANCE
CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಇ-ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಅವರ ಆನ್‌ಲೈನ್ ಹರಾಜು ಪ್ಲಾಟ್‌ಫಾರ್ಮ್ https://gold.samil.in ನಲ್ಲಿ ಆನ್‌ಲೈನ್ ಮೂಲಕ 26.04.2025 ರಂದು ಮಧ್ಯಾಹ್ನ 02:00 ರಿಂದ 05:00 ರವರೆಗೆ ನ ನಡುವೆ ಇ-ಪ್ರೊಕ್ಯೂರ್ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್ ಆನ್‌ಲೈನ್‌ನ ಮೂಲಕ ನಡೆಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿ ನ ಬದಲಾವಣೆಯನ್ನು (ಏನಾದರೂ ಇದ್ದರೆ) ಹರಾಜಿನ ಕೇಂದ್ರದಲ್ಲಿ ಪ್ರದರ್ಶಿಸಲಾಗುತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಇ-ಹರಾಜು ನಡೆಸಲು ಅಸಾಧ್ಯವಾದರೆ ಅಥವಾ ಹರಾಜು ಅದೇ ದಿನ ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಹರಾಜು ಪ್ಲಾಟ್‌ಫಾರ್ಮ್ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಹರಾಜು ಮಾಡಲಾಗಿರದ ಚಿನ್ನಾಭರಣಗಳನ್ನು, ಹರಾಜು ಪ್ಲಾಟ್‌ಫಾರ್ಮ್‌ನಲ್ಲಿ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವುಗಳ ವಿವರಗಳನ್ನು ಪ್ರದರ್ಶಿಸಿದ ಬಳಿಕ ನಂತರದ ಕೆಲಸದ ದಿನಗಳಲ್ಲಿ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಶಾಖೆಯ ಮಟ್ಟದಲ್ಲಿ ಹರಾಜು ಅಪೇಕ್ಷಿತ ಪ್ರತಿಸ್ಪಂದನವನ್ನು ಪಡೆಯಲು ವಿಫಲವಾದರೆ, ಜಿಲ್ಲಾ ಮಟ್ಟದಲ್ಲಿ ಯಾವುದೇ ಮುಂದಿನ ಸೂಚನೆ ನೀಡದೆ 07.05.2025 ದಂದು ಅವನ್ನು ನಿರ್ದಿಷ್ಟ ಪಡಿಸಲಾದ ಜಿಲ್ಲಾ ಕೇಂದ್ರದಲ್ಲಿ ಹರಾಜು ಮಾಡಲಾಗುತ್ತದೆ, ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಜಿಲ್ಲಾ ಮಟ್ಟದ ಹರಾಜನ್ನು ನಡೆಸಲಾಗದಿದ್ದರೆ ಅಥವಾ ಆದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಜಿಲ್ಲಾ ಮಟ್ಟದ ಹರಾಜನ್ನು ನಡೆಸುವ ಅಥವಾ ಅದನ್ನು ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಜಿಲ್ಲಾ ಕೇಂದ್ರ : ಬಳ್ಳಾರಿ-ದುರ್ಗಾಂಬಾ ದೇವಸ್ಥಾನ ಜಿಎಲ್ - ಇಂಡಿಯಾ ಇನ್ಫೋಲೈನ್ ಫೈನಾನ್ಸ್ ಲಿಮಿಟೆಡ್ , ದುರ್ಗಾಂಬಾ ದೇವಸ್ಥಾನದ ಎದುರು, ಪಾರ್ವತಿ ನಗರ, ಮುಖ್ಯ ರಸ್ತೆ ಬಳ್ಳಾರಿ

ಶಾಖೆಯ ಹೆಸರು: ಬಳ್ಳಾರಿ-ದುರ್ಗಾಂಬಾ ದೇವಸ್ಥಾನ ಜಿಎಲ್. ತಾಲೂಕು - ಬಳ್ಳಾರಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL32073943, GL32067900, GL33402885, GL32941546, GL24257523, GL33489312, GL33381700, GL33314599
ಶಾಖೆಯ ಹೆಸರು: ಬಳ್ಳಾರಿ-ಕುರುಗೋಡು ಜಿಎಲ್. ತಾಲೂಕು - ಬಳ್ಳಾರಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL24847215, GL33059277, GL33027934, GL32875954
ಶಾಖೆಯ ಹೆಸರು: ಬಳ್ಳಾರಿ-ಸಿರುಗುಪ್ಪ, ತಾಲೂಕು - ಸಿರುಗುಪ್ಪ
ಚಿನ್ನದ ಸಾಲದ ಖಾತೆ ಸಂಖ್ಯೆ: GL25322934, GL30932834, GL33817324, GL27603715, GL33988977, GL33996637, GL32398549, GL33180853
ಶಾಖೆಯ ಹೆಸರು: ಸಂಡೂರ-ಸಂಡೂರ ಜಿಎಲ್. ತಾಲೂಕು - ಸಂಡೂರ
ಚಿನ್ನದ ಸಾಲದ ಖಾತೆ ಸಂಖ್ಯೆ: GL32734906, GL32930142, GL32614809, GL33524377, GL32785343, GL25245943, GL24546324, GL32577179, GL32370930, GL33037857, GL33188778, GL34119732

ಇ-ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್‌ಎಲ್ ಗುಣಮಟ್ಟ, ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ, ಚಿನ್ನದ ಆಭರಣಗಳು. ಇ-ಹರಾಜು ಪ್ರಕ್ರಿಯೆ ಮತ್ತು ಅಂತಹ ಇ-ಹರಾಜಿಗೆ ಅನುಸಾರವಾಗಿ ಮಾರಾಟವು (ಯಾವುದಾದರೂ ಇದ್ದರೆ) ಐಐಎಫ್‌ಎಲ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಲು ಸೂಕ್ತವೆಂದು ಪರಿಗಣಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಐಐಎಫ್‌ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.
ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ದಿನಾಂಕ: 23.04.2025
ಸ್ಥಳ: ಬಳ್ಳಾರಿ
ಎಸ್‌ಡಿ/-
ಅಧಿಕೃತಸಹಿ
ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್

IIFL FINANCE
CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಇ-ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಅವರ ಆನ್‌ಲೈನ್ ಹರಾಜು ಪ್ಲಾಟ್‌ಫಾರ್ಮ್ https://gold.samil.in ನಲ್ಲಿ ಆನ್‌ಲೈನ್ ಮೂಲಕ 26.04.2025 ರಂದು ಮಧ್ಯಾಹ್ನ 02:00 ರಿಂದ 05:00 ರವರೆಗೆ ನ ನಡುವೆ ಶ್ರೀರಾಮ್ ಆಟೋಮಾಲ್ ಇಂಡಿಯಾ ಲಿಮಿಟೆಡ್ ಆನ್‌ಲೈನ್‌ನ ಮೂಲಕ ನಡೆಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿ ನ ಬದಲಾವಣೆಯನ್ನು (ಏನಾದರೂ ಇದ್ದರೆ) ಹರಾಜಿನ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಇ-ಹರಾಜು ನಡೆಸಲು ಅಸಾಧ್ಯವಾದರೆ ಅಥವಾ ಹರಾಜು ಅದೇ ದಿನ ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಹರಾಜು ಪ್ಲಾಟ್‌ಫಾರ್ಮ್ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಹರಾಜು ಮಾಡಲಾಗಿರದ ಚಿನ್ನಾಭರಣಗಳನ್ನು, ಹರಾಜು ಪ್ಲಾಟ್‌ಫಾರ್ಮ್‌ನಲ್ಲಿ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವುಗಳ ವಿವರಗಳನ್ನು ಪ್ರದರ್ಶಿಸಿದ ಬಳಿಕ ನಂತರದ ಕೆಲಸದ ದಿನಗಳಲ್ಲಿ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಶಾಖೆಯ ಮಟ್ಟದಲ್ಲಿ ಹರಾಜು ವಿಫಲವಾದಲ್ಲಿ ಅದನ್ನು 07.05.2025 ರಂದು ಯಾವುದೇ ಸೂಚನೆ ಇಲ್ಲದೆ ಜಿಲ್ಲಾ ಮಟ್ಟದಲ್ಲಿ ನಿಗದಿತ ಜಿಲ್ಲಾ ಕೇಂದ್ರದಲ್ಲಿ ಮರು ಹರಾಜು ಮಾಡಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಜಿಲ್ಲಾ ಮಟ್ಟದ ಹರಾಜನ್ನು ನಡೆಸಲಾಗದಿದ್ದರೆ ಅಥವಾ ಆದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಜಿಲ್ಲಾ ಮಟ್ಟದ ಹರಾಜನ್ನು ನಡೆಸುವ ಅಥವಾ ಅದನ್ನು ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಶಾಖೆಯ ಹೆಸರು: ಕೊಪ್ಪಳ-ಜಿಎಲ್- 1ನೇ ಮಹಡಿ ಎದುರು. ಬಸ್ ನಿಲ್ದಾಣದ ಹತ್ತಿರ ನೀರಿನ ಟ್ಯಾಂಕ್ ಎಂ ಬಿ ರಸ್ತೆ ಕೋಲಾರ-563101
ಶಾಖೆಯ ಹೆಸರು: ಗಂಗಾವತಿ-ಗಂಗಾವತಿ ಜಿಎಲ್, ತಾಲೂಕು - ಗಂಗಾವತಿ ಚಿನ್ನದ ಸಾಲದ ಖಾತೆ ಸಂಖೆ. : GL25118445, GL25042630, GL34044943, GL34038411, GL34166488, GL34184270, GL33628410
ಶಾಖೆಯ ಹೆಸರು: ಕೊಪ್ಪಳ-ಜಿಎಲ್, ತಾಲೂಕು - ಕೊಪ್ಪಳ ಚಿನ್ನದ ಸಾಲದ ಖಾತೆ ಸಂಖೆ. : GL28027657, GL28127493, GL32603149, GL25432218, GL28424556, GL34102154
ಶಾಖೆಯ ಹೆಸರು: ಕೊಪ್ಪಳ-ಕನಕಗಿರಿ ಜಿಎಲ್, ತಾಲೂಕು - ಗಂಗಾವತಿ ಚಿನ್ನದ ಸಾಲದ ಖಾತೆ ಸಂಖೆ. : GL32870180, GL33832646, GL32883262, GL33772702, GL33693419, GL31842918, GL31854122
ಶಾಖೆಯ ಹೆಸರು: ಕೊಪ್ಪಳ-ಕಾರಟಗಿ ಜಿಎಲ್, ತಾಲೂಕು - ಗಂಗಾವತಿ ಚಿನ್ನದ ಸಾಲದ ಖಾತೆ ಸಂಖೆ. : GL33479108, GL30817534, GL30824651, GL33091486, GL32895746, GL32876959, GL24501951, GL34149495, GL27758903, GL24680375, GL32918083, GL33994336, GL33976350
ಶಾಖೆಯ ಹೆಸರು: ಕೊಪ್ಪಳ ಕುಕನೂರು ಜಿಎಲ್. ತಾಲೂಕು - ಯೆಲ್ಬುರ್ಗಾ ಚಿನ್ನದ ಸಾಲದ ಖಾತೆ ಸಂಖೆ. : GL33810429, GL33401322, GL33392394, GL34027397, GL25233336, GL23491388, GL34215104, GL33450300, GL34194131, GL27012328, GL25555302, GL32652970, GL32609568, GL32664890, GL32816574, GL32881796, GL32589419, GL33176027, GL33160995, GL34147159, GL33175775, GL33158634
ಶಾಖೆಯ ಹೆಸರು: ಕೊಪ್ಪಳ-ಕುಸ್ತಗಿ, ತಾಲೂಕು - ಕುಷ್ಟಗಿ ಚಿನ್ನದ ಸಾಲದ ಖಾತೆ ಸಂಖೆ. : GL34341626, GL33463880, GL33450357, GL30666056, GL33496785, GL31947084, GL33382918, GL34304734, GL34022016, GL34015093, GL32154065, GL30903270, GL34343619, GL33003403, GL33018890, GL32947393, GL32960989, GL32988082, GL25989856, GL30876002, GL31608916, GL33487270, GL33774450, GL30790808, GL30911726

ಇ-ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್‌ಎಲ್ ಗುಣಮಟ್ಟ, ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ, ಚಿನ್ನದ ಆಭರಣಗಳು. ಇ-ಹರಾಜು ಪ್ರಕ್ರಿಯೆ ಮತ್ತು ಅಂತಹ ಇ-ಹರಾಜಿಗೆ ಅನುಸಾರವಾಗಿ ಮಾರಾಟವು (ಯಾವುದಾದರೂ ಇದ್ದರೆ) ಐಐಎಫ್‌ಎಲ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಲು ಸೂಕ್ತವೆಂದು ಪರಿಗಣಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಐಐಎಫ್‌ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.
ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ದಿನಾಂಕ: 23.04.2025
ಸ್ಥಳ: ಕೊಪ್ಪಳ
ಎಸ್‌ಡಿ/-
ಅಧಿಕೃತಸಹಿ
ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್

ಸಮಾಚಾರ ಸಣ್ಣದಲ್ಲ

ಮಸ್ಕಿ ಪುರಸಭೆ ಆದಾಯಕ್ಕೆ ಕತ್ತರಿ

ಮಸ್ಕಿ: ಇಲ್ಲಿಯ ಪುರಸಭೆ ಹೊಸ ಕಟ್ಟಡ ಬಳಿ ನಿರ್ಮಾಣ ಗೊಂಡಿರುವ ಒಟ್ಟು 14 ವಾಣಿಜ್ಯ ಮಳಿಗೆಗಳ ಪೈಕಿ 8 ಮಳಿಗೆ ಗಳ ಲೀಜ್ ಪ್ರಕ್ರಿಯೆ ಪೂರ್ಣ ಗೊಂಡು 2 ತಿಂಗಳಾದರೂ ಮಳಿಗೆ ಗಳನ್ನು ಲೀಜ್ ಪಡೆದವರಿಗೆ ಹಸ್ತಾಂತರಿಸದ ಕಾರಣ ಪುರಸಭೆ ಆದಾಯಕ್ಕೆ ಕತ್ತರಿ ಬಿದ್ದಿದೆ ಎಂದು ಸಾರ್ವಜನಿಕರು ದೂರಿದ್ದಾರೆ. ನೆಲ ಮಹಡಿಯ 7 ಮೇಲ್ಭಾಗದ ಒಂದು ಮಳಿಗೆ ಬಾಡಿಗೆ ಸೇರಿ ತಿಂಗಳಿಗೆ 1.25 ಲಕ್ಷ ರು. ಆದಾಯಕ್ಕೆ ಕೊಕ್ಕೆ ಬಿದ್ದಿದೆ. ಒಟ್ಟು 14 ಮಳಿಗೆ ಪೈಕಿ ನೆಲಮಹಡಿಯ 7 ಮಳಿಗೆ ಗಳ ಬಾಡಿಗೆ ಹರಾಜು ಪೂರ್ಣಗೊಂಡಿದೆ 2 ನೇ ಅಂತಸ್ತಿನ 7 ಮಳಿಗೆ ಗಳ ಪೈಕಿ 1 ಮಳಿಗೆ ಬಾಡಿಗೆ ಹರಾಜು ಪ್ರಕ್ರಿಯೆ ಪೂರ್ಣಗೊಂಡಿದೆ. 2 ನೇ ಅಂತಸ್ತಿನ ಮಳಿಗೆ ಬಾಡಿಗೆ ಹೆಚ್ಚಾದ ಕಾರಣ ಲೀಜ್ ಪಡೆಯಲು ಯಾರೂ ಮುಂದೆ ಬರುತ್ತಿಲ್ಲ. ವಾಣಿಜ್ಯ ಮಳಿಗೆ ಗಳು ಓಪನ್ ಆಗದ ಕಾರಣ ಮಳಿಗೆ ಗಳ ಮುಂಭಾಗ ಖಾಸಗಿ ವಾಹನ ಪಾರ್ಕಿಂಗ್ ಮಾಡಲು ಅನುಕೂಲವಾಗಿದೆ. ಸಂಬಂಧ ಪಟ್ಟ ಅಧಿಕಾರಿ ಗಳು ಗಮನ ಹರಿಸಿ ಮಳಿಗೆಗಳನ್ನು ಲೀಜ್ ಪಡೆದವರಿಗೆ ಮಳಿಗೆ ಗಳನ್ನು ಹಸ್ತಾಂತರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮೂಲ ಸೌಕರ್ಯ ಒದಗಿಸಲು ಮನವಿ

ಮುದಗಲ್: ಪಟ್ಟಣದ ಪುರಸಭೆ ವ್ಯಾಪ್ತಿಯ ವಾರ್ಡ ನಂ 1 ರಲ್ಲಿ ಮೂಲಭೂತ ಸೌಕರ್ಯಗಳಿಂದ ವಂಚಿತ ವಾಗಿದೆ. ಕೂಡಲೇ ಮೂಲ ಸೌಕರ್ಯಗಳನ್ನು ಒದಗಿಸ ಬೇಕೆಂದು ಇಲ್ಲಿನ ನಿವಾಸಿಗಳು ಪುರಸಭೆ ಅಧಿಕಾರಿಗೆ ಮನವಿ ಸಲ್ಲಿಸಿದರು. ಚರಂಡಿ ಸ್ವಚ್ಚತೆ, ವಿದ್ಯುತ್, ಶೌಚಾಲಯ, ವಸತಿ, ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಕರ್ಯಗಳು ಸಮರ್ಪಕ ವಾಗಿ ಇಲ್ಲದೇ ಇದ್ದರಿಂದ ಕಾಲೋನಿಯ ನಿವಾಸಿಗಳು ದಿನನಿತ್ಯ ಪರದಾಡುವಂ ತಾಗಿದೆ. ಕೂಡಲೇ ಪುರಸಭೆ ವಾರ್ಡಗೆ ಆಗಮಿಸಿ ಮೂಲ ಸೌಕರ್ಯಗಳಿಗೆ ಆದ್ಯತೆ ನೀಡಬೇಕೆಂದು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಈರಜ್ಜ ಬಲಿ, ಶಾಮೀದ್, ಅಲಿ, ಬಾಷಾ, ಅಕ್ಬರ್, ರವಿ, ಖಾಸಿಂ ಅಲಿ, ರಾಜಾಭೀ, ದೌಲಭಿ, ಶಖೀಲ್, ಅಬ್ದುಲ್ ಮುಲ್ಲಾ, ಕಾಸಿಂ ಇತರರು ಇದ್ದರು.

ವಿಷ ಜಂತುಗಳ ನಿರ್ಲಕ್ಷ್ಯ ಬೇಡ

ಮುದಗಲ್: ಜನರಿಗೆ ವಿಷ ಜಂತುಗಳು ಕಚ್ಚಿದರೆ ನಿರ್ಲಕ್ಷ್ಯ ವಹಿಸದೆ ಸಮೀಪದ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಬೇಕು ಎಂದು

ಮಾಕಾಪೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತಾಧಿಕಾರಿ ಡಾ. ಅನಂತಕುಮಾರ ಹೇಳಿದರು. ಮಂಗಳವಾರ ಪತ್ರಿಕೆ ಜೊತೆ ಮಾತನಾಡಿದ ಅವರು, ವಿಷ ಜಂತುಗಳು ಕಚ್ಚಿದ್ದಾಗ ಅನೇಕ ಮೂಡ ನಂಬಿಕೆಗಳಿಂದ ಪ್ರಾಣ ಕಳೆದುಕೊಂಡಿರುವ ಉದಾಹರಣೆಗಳಿವೆ. ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದದಲ್ಲಿ ಜನರಿಗೆ ಹಾವು ಚೇಳು ಸೇರಿದಂತೆ ವಿಷ ಜಂತುಗಳು ಕಚ್ಚಿದರೆ ಗಿಡ ಹಾಕುವುದು ನೀರು ಕುಡಿಸುವುದು ಸೇರಿದಂತೆ ವಿವಿಧ ರೀತಿಯ ಖಾಸಗಿ ಔಷಧ ಹಾಕುವುದು ಮತ್ತು ಮೂಡ ನಂಬಿಕೆಗಳಿಗೆ ಬಲಿಯಾಗಬಾರದು ಮತ್ತು ಆ ಸಮಯದಲ್ಲಿ ವಿನ: ಕಾರಣ ಸಮಯ ವ್ಯರ್ಥಮಾಡದೆ ಮೊದಲು ಸಮೀಪದ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಬೇಕು ಮತ್ತು 108 ವಾಹನಕ್ಕೆ ದೂರವಾಣಿ ಕರೆ ಕೂಡ ಮಾಡಬಹುದು ಜನರು ವಿಷಜಂತುಗಳ ನಿಕ್ಷಾಳಜಿವಹಿಸದೆ ಎಚ್ಚರಿಕೆಯಿಂದ ಇರಬೇಕು ಎಂದು ಡಾ. ಅನಂತಕುಮಾರ ಮನವಿ ಮಾಡಿಕೊಂಡರು.

ವೈದ್ಯಕೀಯಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಹಿನ್ನೆಲೆ ಧರ್ಮನಗೌಡ ಅವರಿಗೆ ಇಂಟರ್ ನ್ಯಾಷನಲ್ ಇವೂಮನ್ ಡಿಪಾರ್ಟ್ಮೆಂಟ್ ಕೌನ್ಸಿಲ್ ಪುಣೆಯ ಜವಹರಲಾಲ್ ನೆಹರು ಮೆಮೋರಿಯಲ್ ಹಾಲ್ ನಲ್ಲಿ ಅಂತರಾಷ್ಟ್ರೀಯ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೊಪ್ಪಳದಲ್ಲಿ ನಡೆದ ಜನಾಕ್ರೋಶ ಯಾತ್ರೆ | ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ

ಜನರ ವಿಶ್ವಾಸ ಕಳೆದುಕೊಂಡ ಕಾಂಗ್ರೆಸ್ ಸರಕಾರ

ಕೊಪ್ಪಳ: ಗ್ಯಾರಂಟಿ ಯೋಜನೆಯಿಂದ ರಾಜ್ಯದ ಜನ ಸುಭಿಕ್ಷೆಯಿಂದ ಇದ್ದಾರೆ ಎಂಬ ಭ್ರಮೆಯಲ್ಲಿ ಸಿಎಂ ಸಿದ್ದರಾಮಯ್ಯ ಇದ್ದಾರೆ. ಆದರೆ, ಈ ಸರಕಾರ ಕೇವಲ 20 ತಿಂಗಳಲ್ಲಿ ಜನರ ವಿಶ್ವಾಸ ಕಳೆದುಕೊಂಡಿದೆ. ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ಮಾಡಿದರು.

ನಗರದ ಜವಾಹರ ರಸ್ತೆಯಲ್ಲಿ ನಡೆದ ಜನಾಕ್ರೋಶ ಯಾತ್ರೆಯ ಬಹಿರಂಗ ಸಭೆಯಲ್ಲಿ ಮಂಗಳವಾರ ಮಾತನಾಡಿದರು. ರಾಜ ಪ್ರಭುತ್ವದಲ್ಲಿ ಮಹಾರಾಜರೂ ಮಾರು ವೇಷದಲ್ಲಿ ಹೋಗಿ ಜನರ ಸಂಕಷ್ಟ ಕೇಳುತ್ತಿದ್ದರು. ಆದರೆ, ಸಿಎಂ ಸಿದ್ದರಾಮಯ್ಯ ಬೆಂಗಳೂರು ಬಿಟ್ಟು ರಾಜ್ಯದ ಯಾವುದೇ ಭಾಗಕ್ಕೆ ಬರುತ್ತಿಲ್ಲ. ರೈತರು ವಿದ್ಯುತ್ ಸಂಪರ್ಕ ಪಡೆಯಲು 3 ಲಕ್ಷ ರು. ತೆರಬೇಕಿದೆ. ಈ ಹಿಂದೆ 25 ಸಾವಿರ ರು. ಪಾವತಿಸಿ ಆರ್.ಆರ್. ನಂಬರ್ ಪಡೆದರೆ ವಿದ್ಯುತ್ ಸಂಪರ್ಕ ದೊರೆಯುತ್ತಿತ್ತು. ಈಗ ರೈತನ ಪಾಡು ಹೇಳ ತೀರದಾಗಿದೆ. ಆಲಿಕಲ್ಲು ಮಳೆಯಾದಾಗ ಯಡಿಯೂರಪ್ಪ ಸರಕಾರ ಎಲ್ಲ ಗ್ರಾಮಕ್ಕೆ ಅಧಿಕಾರಿಗಳನ್ನು ಕಳುಹಿಸಿ ಸರ್ವೆ ಮಾಡಿಸಿ, ಪರಿಹಾರ ನೀಡಿದರು. ಮಳೆ ಹಾನಿಗೆ ಯಡಿಯೂರಪ್ಪ ಸರಕಾರ 5 ಲಕ್ಷ ರು. ಸಹಾಯ ಧನ ನೀಡಿತ್ತು. ಈಗ ಕೇವಲ 75 ಸಾವಿರ ರು. ಕೊಡುತ್ತಿದ್ದಾರೆ. ಈ ಎಲ್ಲ ವಿಚಾರದ ಹಿನ್ನೆಲೆ ನಿರೀಕ್ಷೆಗೂ ಮೀರಿದ ಜನ ಬೆಂಬಲ ಜನಾಕ್ರೋಶ ಯಾತ್ರೆಗೆ ಸಿಗುತ್ತಿದೆ. ಜನರು ಸ್ವಯಂ ಪ್ರೇರಿತರಾಗಿ ಯಾತ್ರೆಯಲ್ಲಿ ಭಾಗಿ ಆಗುತ್ತಿದ್ದಾರೆ ಎಂದರು.

ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣ. ಆದರೆ, ಪುರುಷರಿಗೆ ದುಪ್ಪಟ್ಟು ಚಾರ್ಜ್ ಮಾಡುತ್ತಿದ್ದಾರೆ. ಮತ್ತೊಂದೆಡೆ ರಾಜ್ಯ ಸರಕಾರ 6.5 ಸಾವಿರ ಕೋಟಿ ರು. ನಾನಾ ಸಾರಿಗೆ ನಿಗಮಗಳಿಗೆ ನೀಡಬೇಕಿದೆ. ಸಿಎಂ ಸಿದ್ದರಾಮಯ್ಯ ಅವರಿಗೆ ಜನರ ಹಿತಾಸಕ್ತಿ ಬೇಕಾಗಿಲ್ಲ. ತಮ್ಮ ಕುರ್ಚಿ ಉಳಿಸಿಕೊಳ್ಳುವುದು ಮಾತ್ರ ಬೇಕಿದೆ. ಅದಕ್ಕಾಗಿ ಜಾತಿ ಗಣತಿ ಮುಂದೆ ತಂದು ನಿಲ್ಲಿಸಿದ್ದಾರೆ. ಕಾಂಗ್ರೆಸ್ ಹಿರಿಯ ನಾಯಕ ವೀರಪ್ಪ ಮೋಯ್ಲಿ ಅವರೇ ಇದು ವಾಸ್ತವಿಕ ವರದಿ ಅಲ್ಲ ಎಂದು ಹೇಳಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಭ್ರಷ್ಟಾಚಾರದಲ್ಲಿ ದೇಶದಲ್ಲಿ ಮೊದಲ ಸ್ಥಾನದಲ್ಲಿ ಇದೆ ಎಂದು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಹೇಳಿದ್ದಾರೆ. ಸಿದ್ದರಾಮಯ್ಯ ಸಿಎಂ ಆದ ನಂತರ ಅಹಿಂದ ವರ್ಗ ಸಂಪೂರ್ಣ ನಿರ್ಲಕ್ಷ್ಯ ಮಾಡಿದ್ದಾರೆ. ಮುಸ್ಲಿಂಮರಿಗೆ ಕಾಮಗಾರಿಯಲ್ಲಿ ಶೇ. 4 ರಷ್ಟು ಮೀಸಲಾತಿ ನೀಡಲಾಗಿದೆ. ಮುಸ್ಲಿಂ ಬಡ ಯುವತಿ ಮದುವೆಗೆ 50 ಸಾವಿರ, ವಿದೇಶಿ ಅಭ್ಯಾಸಕ್ಕೆ 30 ಲಕ್ಷ ರು. ಕೊಡುತ್ತಿದ್ದಾರೆ. ಹಿಂದೂಗಳಲ್ಲಿ ಬಡವರೇ ಇಲ್ಲವೇ ಸಿದ್ದರಾಮಯ್ಯ ರಾಜ್ಯದ ಸಿಎಂ ಆಗಿದ್ದಾರೋ? ಮುಸ್ಲಿಂಮರ ಸಿಎಂ ಎಂದು ಅವರೇ ಹೇಳಬೇಕು ಎಂದು ಪ್ರಶ್ನಿಸಿದರು.

ಕೊಪ್ಪಳದ ಜವಾಹರ ರಸ್ತೆಯಲ್ಲಿ ನಡೆದ ಜನಾಕ್ರೋಶ ಯಾತ್ರೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಂಗಳವಾರ ಉದ್ಘಾಟಿಸಿದರು.

ಅಂಬೇಡ್ಕರ್ ಕಾಂಗ್ರೆಸ್ ವಿರೋಧಿಸಿದ್ದರು :ನಾರಾಯಣಸ್ವಾಮಿ

ಅಂಬೇಡ್ಕರ್ ವಿಚಾರದಲ್ಲಿ ಕಾಂಗ್ರೆಸ್‌ಗೆ ಎಂಥ ದ್ವೇಷ ಇತ್ತು ಎಂಬುದಕ್ಕೆ ಸಾಕಷ್ಟು ಉದಾಹರಣೆ ಇವೆ. ಬಾಬಾ ಸಾಹೇಬರು ಅನೇಕ ಬಾರಿ ಕಾಂಗ್ರೆಸ್ ಸುಡುವ ಮನೆ ಎಂದು ಹೇಳಿದ್ದಾರೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಚಲುವಾದಿ ನಾರಾಯಣಸ್ವಾಮಿ ಹೇಳಿದರು. ಚುನಾವಣೆಯಲ್ಲಿ ಅಂಬೇಡ್ಕರ್ ಅವರನ್ನು ಸಾವರ್ಕರ್ ಸೋಲಿಸಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಸುಳ್ಳು ಹೇಳಿದ್ದಾರೆ. ಇದನ್ನು ಸಾಬೀತು ಮಾಡಿದರೆ ನಾನು ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ. ಸಿದ್ದರಾಮಯ್ಯ ತಮ್ಮ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆಯೇ ಎಂದು ಸಿಎಂ ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿದರು.

> ವೇದಿಕೆ ಮೇಲೆ ಇರುವ ನಮ್ಮ ಕಾರ್ಯಕರ್ತರು ಮತ್ತು ಮುಖಂಡರು ಇಲ್ಲಿನ ಶಾಸಕರು, ಸಚಿವರ ವಿರುದ್ಧ ಮೈಚಳಿಬಿಟ್ಟು ಹೋರಾಟ ಮಾಡಬೇಕು. ಈ ಸರಕಾರದ ಶಾಸಕರು, ಸಚಿವರು ನಮಗೆ ಸಹಾಯ ಮಾಡಬಹುದು ಎಂದು ತಿಳಿದುಕೊಂಡು, ಮೈ ಮರೆಯಬಾರದು. ಬಡಿಗೆ ಹಿಡಿದುಕೊಂಡು ಬಂದು ಜನ ವಿರೋಧಿ ಸರಕಾರ ದ ನಡೆ ಖಂಡಿಸಬೇಕು.
> – ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

> ಸ್ವತಃ ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಇದು ಅತ್ಯಂತ ಭ್ರಷ್ಟ ಸರಕಾರ ಎಂದು ಹೇಳಿದ್ದಾರೆ. ಅವರ ಬಾಯಿಂದ ಸತ್ಯದ ಮಾತು ಹೊರಗೆ ಬಂದಿದೆ. ನಂತರ ಅವರಿಗೆ ಬೆದರಿಸಿ, ಸ್ಪಷ್ಟನೆ ನೀಡಿದ್ದಾರೆ. ಅದೆಲ್ಲ ಸುಳ್ಳು. ಅಂಜನಾದ್ರಿಯಲ್ಲಿ ಒಂದು ವಿಶೇಷ ಪೊಲೀಸ್ ಠಾಣೆ ಮಾಡುವ ಯೋಗ್ಯತೆ ಇಲ್ಲದ ಸರಕಾರ ಇದು. ಸಿದ್ದರಾಮಯ್ಯ ಯಾದವರ ಸಮಾವೇಶದಲ್ಲೂ ಜಾತಿಯ ವಿಷ ಬೀಜ ಬಿತ್ತಿದ್ದಾರೆ. ಎಲ್ಲ ರೀತಿಯ ಪ್ರಮಾಣ ಪತ್ರದ ಬೆಲೆ ಏರಿಕೆ ಮಾಡಿರುವ ರಾಕ್ಷಸೀಯ ಗುಣದ ಸಿದ್ದರಾಮಯ್ಯ ಸರಕಾರದ ವಿರುದ್ಧ ಘೋಷಣೆ ಮೊಳಗಲಿದೆ. ಸಿದ್ದರಾಮಯ್ಯ ಅವರ ಪಾಪದ ಕೊಡ ತುಂಬಿದೆ. ಅದಕ್ಕೆ ಮತ್ತಷ್ಟು ಪಾಪ ಮಾಡುತ್ತಿದ್ದಾರೆ.
> – ಜಿ.ಜನಾರ್ದನ ರೆಡ್ಡಿ, ಶಾಸಕ

> ಮೋಟಾ ಖರ್ಗೆ ದೆಹಲಿಯಲ್ಲಿ ಇದೆ. ರಾಜ್ಯದಲ್ಲಿ ಇಲ್ಲಿ ಛೋಟಾ ಖರ್ಗೆ ಇದೆ. ಈ ಛೋಟಾ ಖರ್ಗೆ ಬರೀ ಸುಳ್ಳು ಬಿತ್ತುವ ಕೆಲಸ ಮಾಡುತ್ತಿದೆ. ಸಿಎಂ ಬರೀ ಸುಳ್ಳು ಹೇಳುತ್ತಾರೆ. ಇವರ ಸುಳ್ಳು ಕೇಳಿದ ಜನರು ಲುಂಗಿ ಬಿಚ್ಚುವ ಕಾಲ ದೂರ ಇಲ್ಲ. ಜಾತಿ ಗಣತಿಯ ಎಬಿಸಿಡಿಯೂ ಸಚಿವ ಶಿವರಾಜ ತಂಗಡಗಿಗೆ ಗೊತ್ತಿಲ್ಲ. ಆತನಿಗೆ ವರದಿಯ ಬಗ್ಗೆ ಗೊತ್ತೇ ಇಲ್ಲ. ಎಸ್ಸಿಯಲ್ಲಿ 101 ಜಾತಿ ಇವೆ. ಆದರೆ, ಜಾತಿ ಗಣತಿಯಲ್ಲಿ 181 ಜಾತಿ ಆಗಿವೆ.
> – ಚಲುವಾದಿ ನಾರಾಯಣಸ್ವಾಮಿ, ವಿಪಕ್ಷ ನಾಯಕ

> ಜನಾಕ್ರೋಶ ಯಾತ್ರೆಯಿಂದ ಆಡಳಿತ ಪಕ್ಷದ ನಾಯಕರಿಗೆ ನಿದ್ರೆ ಬರದಂತೆ ಆಗಿದೆ. ತುಂಗಭದ್ರಾ ಕ್ರಸ್ಟ್ ಗೇಟ್ ಬದಲಾವಣೆ ಮಾಡುವ ವಿಚಾರದಲ್ಲಿ ಕೇಂದ್ರದ ಪಾತ್ರ ಏನೂ ಇಲ್ಲ. ಕೇಂದ್ರ ಸರಕಾರ ಟಿಬಿ ಬೋರ್ಡ್ ಗೆ ಕಾರ್ಯದರ್ಶಿ ನೇಮಕ ಮಾಡುತ್ತದೆ. ಮೂರು ರಾಜ್ಯಗಳು ಸೇರಿ ತಮ್ಮ ಪಾಲಿನ ಹಣ ನೀಡಿ ಕ್ರಸ್ಟ್ ಗೇಟ್ ನಿರ್ಮಾಣ ಮಾಡಬೇಕು.
> – ಬಸವರಾಜ ಧಡೆಸುಗೂರ, ಬಿಜೆಪಿ ಜಿಲ್ಲಾಧ್ಯಕ್ಷ

ಮರು ಪರೀಕ್ಷೆಗೆ ಬ್ರಾಹ್ಮಣ ಮಹಾಸಭಾ ಆಗ್ರಹ

ಬ್ರಾಹ್ಮಣ ವಿದ್ಯಾರ್ಥಿಗೆ ಸಿಇಟಿಗೆ ಹಾಜರಾಗಲು ಜನಿವಾರ ತೆಗೆಯುವಂತೆ ಸೂಚಿಸಿದ ಪರೀಕ್ಷಾ ಸಿಬ್ಬಂದಿ ನಡೆ ಖಂಡಿಸಿ ಮಂಗಳವಾರ ಪ್ರತಿಭಟಿಸಲಾಯಿತು.

ಕೊಪ್ಪಳ: ಜನಿವಾರ ತೆಗೆಯಲು ನಿರಾಕರಿಸಿ ಸಿಇಟಿಯಿಂದ ವಂಚಿತವಾಗಿರುವ ಬ್ರಾಹ್ಮಣ ವಿದ್ಯಾರ್ಥಿಗೆ ಮರುಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ಆಗ್ರಹಿಸಿ, ನಗರದ ಜಿಲ್ಲಾಡಳಿತ ಭವನದ ಮುಂದೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೊಪ್ಪಳ ಜಿಲ್ಲಾ ಘಟಕದಿಂದ ಮಂಗಳವಾರ ಪ್ರತಿಭಟಿಸಲಾಯಿತು. ನೂರಾರು ಬ್ರಾಹ್ಮಣ ವಿದ್ಯಾರ್ಥಿಗಳು ಕೃತ್ಯ ಎಸಗಿದ ಅಧಿಕಾರಿಗಳ ನಡೆ ವಿರುದ್ಧ ಘೋಷಣೆ ಕೂಗಿದರು. ಜನಿವಾರ ತೆಗೆಯಲು ಸೂಚಿಸಿದ ಸಿಬ್ಬಂದಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮಹಾಸಭಾ ಜಿಲ್ಲಾ ಪ್ರತಿನಿಧಿ ಗುರುರಾಜ ಎನ್. ಜೋಶಿ ಮಾತನಾಡಿ, ಏ.17 ರಂದು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ, ಧಾರವಾಡ, ಬೆಂಗಳೂರು ಮತ್ತು ಬೀದರ್‌ನಲ್ಲಿ ಪರೀಕ್ಷೆ ಬರೆಯಲು ಬಂದ ಬ್ರಾಹ್ಮಣ ವಿದ್ಯಾರ್ಥಿಗೆ ಜನಿವಾರ ತೆಗೆದು ಪರೀಕ್ಷೆ ಬರೆಯುವಂತೆ ಸೂಚಿಸಲಾಗಿದೆ. ಇದು ಬ್ರಾಹ್ಮಣ ಜನಾಂಗದ ಧಾರ್ಮಿಕ ಭಾವನೆಗೆ ಧಕ್ಕೆ ತರುವ ಕೃತ್ಯ. ಇದನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೊಪ್ಪಳ ಘಟಕ ತೀವ್ರವಾಗಿ ಖಂಡಿಸುತ್ತದೆ. ಸಿಇಟಿಗೂ ಬ್ರಾಹ್ಮಣ ಧರ್ಮದ ಜನಿವಾರಕ್ಕೂ ಏನಾದರೂ ಸಂಬಂಧವಿದೆಯೇ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಉನ್ನತ ಶಿಕ್ಷಣ ಇಲಾಖೆ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಇಂಥ ಯಾವುದೇ ಸೂಚನೆ, ಸುತ್ತೋಲೆ ಹೊರಡಿಸಿಲ್ಲ. ಒಂದೊಮ್ಮೆ ಹೊರಡಿಸಿದ್ದರೆ ಸಚಿವರು ಸ್ಪಷ್ಟೀಕರಣ ನೀಡಬೇಕು. ಈ ಘಟನಗೆ ಮುಖ್ಯ ಕಾರಣವಾಗಿರುವ ತೀರ್ಥಹಳ್ಳಿ, ಹಾಗೂ ಬೀದರ್‌ನ, ಧಾರವಾಡದಲ್ಲಿ ಸಿಇಟಿ ಪರೀಕ್ಷಾ ಕೇಂದ್ರದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಸಿಇಟಿ ಪರೀಕ್ಷಾ ಕೇಂದ್ರದ ಅಧಿಕಾರಿಗಳು ಬ್ರಾಹ್ಮಣ ಸಮಾಜಕ್ಕೆ ಕ್ಷಮೆ ಯಾಚಿಸಬೇಕು. ಪರೀಕ್ಷೆಯಿಂದ ವಂಚಿತರಾದ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆಗೆ ಅವಕಾಶ ನೀಡಬೇಕು. ಮುಂದಿನ ದಿನದಲ್ಲಿ ಈ ರೀತಿ ಘಟನೆ ಮರುಕಳಿಸದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ನೀಡಬೇಕು. ಈ ಘಟನೆ ಮರುಕಳಿಸಿದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಮಹಾಸಭಾ ಜಿಲ್ಲಾ ಸಂಚಾಲಕ ಎಚ್ .ಬಿ.ದೇಶಪಾಂಡೆ, ಸಮಾಜದ ಮುಖಂಡರಾದ ಪ್ರಾಣೇಶ ಮಾದನೂರು, ರಘು ಪ್ರೇಮಾಚಾರ, ಜಗನ್ನಾಥಾಚಾರ, ಡಿ.ವಿ.ಜೋಶಿ, ರಾಘವೇಂದ್ರ ಪೋತೇದಾರ, ವಸಂತ ಪೂಜಾರ, ಸುರೇಶ ದೇಸಾಯಿ ಇದ್ದರು.

ಬಡವರ ಮನೆ ಬಾಗಿಲಿಗೆ ಯೋಜನೆ

ಕಾನಹೊಸಹಳ್ಳಿ: ಇಲ್ಲಿನ ಗಾಣಿಗರ ಸಮು ದಾಯ ಭವನದಲ್ಲಿ ತಾಲೂಕು ಆಡಳಿತ, ತಾಪಂ ಹೋಬಳಿ ಮಟ್ಟದ ಜನಸ್ಪಂದನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರಕಾರವು ಜನಸ್ಪಂದನೆ ಕಾರ್ಯಕ್ರಮದ ಮೂಲಕ ಬಡವರ ಮನೆ ಬಾಗಿಲಿಗೆ ಯೋಜನೆಗಳು ತಲುಪಿಸುವ ಕೆಲಸ ಮಾಡುತ್ತಿದೆ. ಜನರು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಇದು ಉತ್ತಮ ಕಾರ್ಯವಾಗಿದೆ. ಕ್ಷೇತ್ರದಲ್ಲಿ 20 ಕೋಟಿ ರು. ಅನುದಾನದಡಿ ಶಿಕ್ಷಣ, ಆರೋಗ್ಯ, ಸೇರಿ ನಾನಾ ಕ್ಷೇತ್ರಗಳ ಅಭಿವೃದ್ಧಿ ಮಾಡಲಾಗಿದೆ. ಅಲ್ಲದೆ, 30 ಕೋಟಿ ರು.ವೆಚ್ಚದ ಅಭಿವೃದ್ಧಿ ಕಾಮಗಾರಿ ಟೆಂಡರ್ ಹಂತದಲ್ಲಿದೆ. ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯು ಮೇ ಇಲ್ಲವೇ ಜೂನ್ ತಿಂಗಳಲ್ಲಿ ಸಾಕಾರಗೊಳ್ಳಲಿದೆ ಎಂದು ತಿಳಿಸಿದರು.

ಸರಕಾರದಿಂದ ನಡೆಯುವ ಜನಸ್ಪಂದನ ಕಾರ್ಯಕ್ರಮವನ್ನು ಕಾನಹೊಸಹಳ್ಳಿಯಲ್ಲಿ ನಡೆಸಲು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರು ಹೆಚ್ಚು ಉತ್ಸುಕತೆ ತೋರಿರುವುದು ಬಡಜನರ ಬಗ್ಗೆ ಅವರಿಗಿರುವ ಕಾಳಜಿಯಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಹೊಸಪೇಟೆ ಸಹಾಯಕ ಆ ಯುಕ್ತ ಪಿ.ವಿವೇಕಾನಂದ, ಅನ್ನದಾನಯ್ಯ ಸ್ವಾಮಿ, ವಿ.ಕೆ.ನೇತ್ರಾವತಿ, ನರಸಪ್ಪ, ಡಿವೈಎಸ್‌ಪಿ ಮಲ್ಲೇಶ್ ದೊಡ್ಮನಿ, ಕೆ.ಜಿ.ಸಿದ್ದನಗೌಡ, ಲಕ್ಷ್ಮಿ ರಜನಿಕಾಂತ್, ಕುರಿಹಟ್ಟಿ ಬೋಸಯ್ಯ ಸೇರಿ ಅಧಿಕಾರಿಗಳು ಇದ್ದರು.

> ಮನೆ ಬಾಗಿಲಿಗೆ ಅಧಿಕಾರಿಗಳು ತೆರಳಿ ಜನರ ಸಮಸ್ಯೆಗೆ ಸ್ಪಂದಿ ಸುವ ಮೂಲಕ ಪರಿಹಾರ ದೊರಕಿಸಿದೆ. ಸರಕಾರದ ಕಾರ್ಯಕ್ರಮ ದಿಂದ ಬಡ ಜನತೆಗೆ ಹೆಚ್ಚಿನ ಅನುಕೂಲ ವಾಗಿದೆ. ಎಲ್ಲರೂ ಸದ್ಬಳಕೆ ಮಾಡಿಕೊಳ್ಳಿ.
> –ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿ



ತಾಪಂ ಹೋಬಳಿ ಮಟ್ಟದ ಜನಸ್ಪಂದನ ಕಾರ್ಯಕ್ರಮದಲ್ಲಿ ಡಾ.ಎನ್ .ಟಿ.ಶ್ರೀನಿವಾಸ್ ಮಾತನಾಡಿದರು.

ಶರಣರ ವೈಭವ ರಥಯಾತ್ರೆ ಆಗಮನ

ನಗರದ ಡಾ.ರಾಜ್ ಕುಮಾರ್ ರಸ್ತೆಯ ಕಾಲೇಜು ಮೈದಾನದ ಆವರಣದಲ್ಲಿ ರಥಯಾತ್ರೆಯನ್ನು ಸ್ವಾಗತಿಸಿದರು.

ಬಳ್ಳಾರಿ: ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಬದುಕು, ಸಂದೇಶ ಮತ್ತು ಚಿಂತನೆಗಳನ್ನು ಪ್ರಚಾರ ಪಡಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಹಮ್ಮಿಕೊಂಡಿರುವ ಅನುಭವ ಮಂಟಪ-ಬಸವಾದಿ ಶರಣರ ವೈಭವ ರಥಯಾತ್ರೆಯು ಬಳ್ಳಾರಿಗೆ ಆಗಮಿಸಿತು.

ಸಮುದಾಯದ ಮುಖಂಡರು, ನಗರದ ಡಾ.ರಾಜ್ ಕುಮಾರ್ ರಸ್ತೆಯ ಸರಕಾರಿ (ಮಾ.ಪು) ಪದವಿ ಪೂರ್ವ ಕಾಲೇಜು ಮೈದಾನದ ಆವರಣದಲ್ಲಿ ರಥಯಾತ್ರೆಯನ್ನು ಸ್ವಾಗತಿಸಿದರು. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಸವಾದಿ ಶರಣರ ರಥಯಾತ್ರೆಗೆ ಪೂಜೆ ಸಲ್ಲಿಸಿ ಪುಷ್ಪನಮನಗೈದು, ಗೌರವ ಸಮರ್ಪಿಸಲಾಯಿತು.

ಇದೇ ಏ.29 ಮತ್ತು 30ರಂದು ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮದಲ್ಲಿ ಎರಡು ದಿನಗಳ ಕಾಲ ಆಯೋಜಿಸಿರುವ ''ಅನುಭವ ಮಂಟಪ-ಬಸವಾದಿ ಶರಣ ವೈಭವ'' ಕಾರ್ಯಕ್ರಮದ ಅಂಗವಾಗಿ ರಥಯಾತ್ರೆ ಆಯೋಜಿಸಲಾಗಿದ್ದು, ಮಂಗಳವಾರ ಬಳ್ಳಾರಿ ನಗರಕ್ಕೆ ಆಗಮಿಸಿದ ರಥಯಾತ್ರೆಯು ಸಿರುಗುಪ್ಪ ಮೂಲಕ ರಾಯಚೂರು ಜಿಲ್ಲೆಗೆ ರಥಯಾತ್ರೆಯು ತೆರಳಿತು.

ಜಗತ್ತಿನ ಪ್ರಪ್ರಥಮ ಸಂಸತ್ತು ಅನುಭವ ಮಂಟಪ-ಬಸವಾದಿ ಶರಣರ ವೈಭವ ರಥದಲ್ಲಿ ಬಸವಣ್ಣ ಅವರೊಂದಿಗೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ಭಗವಾನ್ ಗೌತಮ ಬುದ್ಧ, ಶಿವಶರಣೆ ಅಕ್ಕಮಹಾದೇವಿ, ಸಂತ ಶಿಶುನಾಳ ಶರೀಫ, ಗುರುನಾನಕ್, ಭಗವಾನ್ ಮಹಾವೀರ, ನಾರಾಯಣ ಗುರು, ಯೇಸು ಕ್ರಿಸ್ತರ ಪ್ರತಿಮೆಗಳನ್ನು ಅಳವಡಿಸಲಾಗಿದೆ. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ್, ರಾಷ್ಟ್ರೀಯ ಬಸವ ದಳ ಕಾರ್ಯದರ್ಶಿ ರವಿಶಂಕರ್, ' ಪನ್ನರಾಜ್ ಸಿರಿಗೇರಿ, ಟಿ.ಎಚ್.ಎಂ. ಬಸವರಾಜ್ ಸೇರಿದಂತೆ ಇಲಾಖೆ ಅಧಿಕಾರಿಗಳು ಇದ್ದರು.

ಜಾತಿಗಣತಿ ಮರು ಸಮೀಕ್ಷೆಗೆ ಶ್ರೀಗಳ ಒತ್ತಾಯ

ರಾಯಚೂರು: ಜಾತಿ ಜನಗಣತಿ ಅವೈಜ್ಞಾನಿಕ ವಾಗಿದೆ. ಹತ್ತು ವರ್ಷದ ಹಿಂದಿನ ವರದಿಯನ್ನ ಒಪ್ಪಲು ಸಾಧ್ಯವಿಲ್ಲ. ವೀರಶೈವ ಲಿಂಗಾಯತ ಸಮಾಜವನ್ನ ಒಳ ಪಂಗಡಗಳಿಂದ ಚೂರು ಚೂರು

ಮಾಡಲಾಗಿದೆ. ಸರ್ಕಾರದ ನಡೆಯನ್ನ ಖಂಡಿಸಿ 28 ರಂದು ಹತ್ತು ಸಾವಿರ ಸಮಾಜ ಬಾಂಧವರೊಂದಿಗೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ವೀರಶೈವ ಲಿಂಗಾಯತ ಸಮಾಜದ ಜಿಲ್ಲಾಧ್ಯಕ್ಷ ಶರಣಭೂಪಾಲ ನಾಡಗೌಡ ಹೇಳಿದರು.

ನಗರದ ಸೋಮವಾರ ಪೇಟೆ ಹಿರೇಮಠದಲ್ಲಿ ಹಲವು ಮಠಾಧೀಶರ ಸಮ್ಮುಖದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಅವರು ಮಾತನಾಡಿದರು. 28 ರಂದು ಹರ್ಷಿತ ಗಾರ್ಡನಲ್ಲಿ ಸಭೆ ನಡೆಸಿ ಡಿಸಿ ಕಚೇರಿವರೆಗೆ ಬೃಹತ್ ಪ್ರತಿಭಟನೆ ಮೂಲಕ ತೆರಳಿ ಮನವಿ ಸಲ್ಲಿಸುತ್ತೇವೆ. ಸಮಾಜದ ಸಚಿವರನ್ನ ಭೇಟಿಯಾಗಿ ಜಾತಿ ಗಣತಿ ವರದಿ ಜಾರಿಗೊಳಿಸದಂತೆ ಒತ್ತಾಯ ಮಾಡುತ್ತೇವೆ. ಸಮಾಜದ ಒಳ ಪಂಗಡಗಳನ್ನ ವಿಂಗಡಿಸಾಗಿದೆ. ಇದು ಉದ್ದೇಶ ಪೂರ್ವಕವಾಗಿ ಮಾಡಲಾಗಿದೆ. ಮತ್ತೊಮ್ಮೆ ಜಾತಿ ಗಣತಿ ಮಾಡಬೇಕು. ಜಾತಿ ಗಣತಿಯ ಮೂಲ ಪ್ರತಿ ಕಳದಿದೆ ಎಂಬ ಮಾಹಿತಿ ಇದ್ದು, ಈ ವರದಿಯನ್ನ ಹೇಗೆ ನಂಬಬೇಕು ವರದಿಯನ್ನ ತಿರುಚಲಾಗಿದೆ ಎಂದು ಅಸಮಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ವೀರಶೈವ ಲಿಂಗಾಯತ ಸಮಾಜವು ಸುಮಾರು 2.5 ಕೋಟಿ ಜನಸಂಖ್ಯೆ ಹೊಂದಿದ್ದು, ಸರಕಾರ ಜಾರಿಗೊಳಿಸಲು ಮುಂದಾಗಿರುವ ವರದಿಯಲ್ಲಿ ಕೇವಲ 66 ಲಕ್ಷ ತೋರಿಸಲಾಗಿದೆ. ಈ ವರದಿಯನ್ನ ಸಮಾಜವು ತೀವ್ರವಾಗಿ ವಿರೋಧಿಸುತ್ತದೆ. ನಮ್ಮ ವಿರೋಧದ ನಡುವೆಯೂ ಮುಂದಿನ ಸಂಪುಟದಲ್ಲಿ ಸರಕಾರ ಒಪ್ಪಿದ್ದಲ್ಲಿ ಉಗ್ರ ಹೋರಾಟ ಮಾಡುತ್ತೇವೆ. ಸರಕಾರ ಒಡೆದಾಳುವ ನೀತಿ ಅನುಸರಿಸುತ್ತಿದೆ. ಇದಕ್ಕೆ ತಕ್ಕ ಪಾಠ ಕಲಿಸುತ್ತೇವೆ. ಕಾಂಗ್ರೆಸ್ ಪಕ್ಷದ ಆಂತರಿಕ ಕಚ್ಚಾಟ ಮರೆಮಾಚಲು ಜಾತಿ ಗಣತಿ ವಿಷಯವನ್ನ ಮುನ್ನೆಲೆಗೆ ತರಲಾಗಿದೆ ಎಂದು ಅವರು ದೂರಿದರು.

ಸುದ್ದಿಗೋಷ್ಟಿಯಲ್ಲಿ ಬಿಚ್ಚಾಲಿ ಮಠದ ವೀರಭದ್ರ ಶಿವಾಚಾರ್ಯ ಸ್ವಾಮಿಜಿ, ನಿಲಗಲ್ ಬೃಹನ್ಮಠದ ಡಾ. ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಜಿ ಕಿಲ್ಲೇ ಬೃಹನ್ಮಠದ ಶಾಂತಮಲ್ಲ ಶಿವಾಚಾರ್ಯ ಸ್ವಾಮಿಜಿ, ಶಿವಾಚಾರ್ಯ ಸ್ವಾಮಿಜಿಸೋಮನಾಥ ಶಿವಾಚಾರ್ಯ ಸ್ವಾಮಿಜಿ ಮಂಗಳವಾರ ಪೇಟೆಯ ವೀರ ಸಂಗಮೇಶ್ವರ ಸ್ವಾಮಿಜಿ, ಸೇರಿದಂತೆ ಸಮಾಜದ ಹಲವು ಮುಖಂಡರು ಉಪಸ್ಥಿತರಿದ್ದರು.

ಮನೆಯಲ್ಲಿ ಕುಳಿತು ಜಾತಿ ಗಣತಿ ವರದಿ

